# ಆಧುನಿಕ ಬೆಂಗಳೂರಿನ ವಸಾಹತುಶಾಹಿ ಪರಂಪರೆ: ವಿಮರ್ಶಾತ್ಮಕ ವಿಶ್ಲೇಷಣೆ

**ಶೈಲಜಾ ಜಿ.**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಪಟ್ಟಣ, ರಾಮನಗರ.

**DOI: https://doi.org/10.5281/zenodo.17959935**

## ABSTRACT:

ಬೆಂಗಳೂರು ನಗರವು ಭಾರತದ ನೂತನ ಮತ್ತು ಪ್ರಗತಿಯ ಸಂಕೇತವಾಗಿ ಪರಿಗಣಿಸಲ್ಪಟ್ಟಿದೆ. ಇದರ ಮೂಲಗಳು ವಸಾಹತುಶಾಹಿ ಪರಂಪರೆಯ ಆಳವಾದ ಬೇರುಗಳಲ್ಲಿ ನೆಲಸಿರುತ್ತವೆ. ಇಂಗ್ಲೀಷರ ಆಡಳಿತ ಕಾಲಮಾನದಲ್ಲಿ ನಿರ್ಮಾಣಗೊಂಡ ಈ ನಗರವು ಆಧುನಿಕತೆ, ಪ್ರಗತಿ ಮತ್ತು ಪಾಶ್ಚಾತ್ಯತೆಯ ಹೊಸ ಮುಖವನ್ನು ಧರಿಸಿತು. ಆದರೆ, ಈ ಆಧುನಿಕತೆಯ ಅಡಿಯಲ್ಲಿ ವಸಾಹತುಶಾಹಿಯ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬಿತ್ತನೆಗಳು ಅಡಕವಾಗಿವೆ. ಈ ಬಿತ್ತನೆಗಳು ಇಂದು ಸಹ ನಗರ ಜೀವನದ ಪ್ರತಿಯೊಂದು ಅಂಶದಲ್ಲಿ ಕಾಣಿಸಿಕೊಳ್ಳುತ್ತಿವೆ. ಬೆಂಗಳೂರು ನಗರದ ವಸಾಹತುಶಾಹಿ ಪರಂಪರೆ ಒಂದು ಇತಿಹಾಸಾತ್ಮಕ ಪ್ರಕ್ರಿಯೆಯ ಫಲವಾಗಿದೆ. ವಸಾಹತುಶಾಹಿಯ ಪ್ರಭಾವವು ಬೆಂಗಳೂರಿನ ನಗರ ಯೋಜನೆ, ಆಡಳಿತ, ಶಿಕ್ಷಣ, ಆರ್ಥಿಕತೆಯಷ್ಟೇ ಅಲ್ಲದೆ ಜನಜೀವನದ ಸಾಂಸ್ಕೃತಿಕ ಆಯಾಮಗಳಲ್ಲಿಯೂ ಆಳವಾಗಿದೆ. ಇಂಗ್ಲಿಷ್ ಭಾಷೆಯ ಪ್ರಾಬಲ್ಯ, ಪಾಶ್ಚಾತ್ಯ ಶಿಕ್ಷಣ, ಪಾಶ್ಚಾತ್ಯ ಶೈಲಿಯ ವಸತಿಗಳು ಹಾಗೂ ಸಾಮಾಜಿಕ ಸಂಸ್ಕಾರಗಳು ನಗರವನ್ನು ಪಾಶ್ಚಾತ್ಯ ಆಧುನಿಕತೆಯ ಮಾದರಿಯನ್ನಾಗಿ ಮಾಡಿವೆ. ಆದರೆ ಈ ಮಾದರಿಯು ಸ್ಥಳೀಯ ಸಂಸ್ಕೃತಿ ಮತ್ತು ಪರಿಸರದ ಮೇಲೆ ಪರಿಣಾಮ ಬೀರಿದೆ.

## KEYWORDS:

ವಸಾಹತುಶಾಹಿ ಪರಂಪರೆ, ಬೆಂಗಳೂರು ನಗರೀಕರಣ, ಕ್ಯಾಂಟೋನ್ಮೆಂಟ್–ಪೇಟೆ ವಿಭಜನೆ, ಸಾಮಾಜಿಕ ಅಸಮಾನತೆ, ನವವಸಾಹತುಶಾಹಿ.

**ಪೀಠಿಕೆ:**

ಬೆಂಗಳೂರು ನಗರವು ಭಾರತದ ನೂತನ ಮತ್ತು ಪ್ರಗತಿಯ ಸಂಕೇತವಾಗಿ ಪರಿಗಣಿಸಲ್ಪಟ್ಟಿದೆ. ಇದರ ಮೂಲಗಳು ವಸಾಹತುಶಾಹಿ ಪರಂಪರೆಯ ಆಳವಾದ ಬೇರುಗಳಲ್ಲಿ ನೆಲಸಿರುತ್ತವೆ. ಇಂಗ್ಲೀಷರ ಆಡಳಿತ ಕಾಲಮಾನದಲ್ಲಿ ನಿರ್ಮಾಣಗೊಂಡ ಈ ನಗರವು ಆಧುನಿಕತೆ, ಪ್ರಗತಿ ಮತ್ತು ಪಾಶ್ಚಾತ್ಯತೆಯ ಹೊಸ ಮುಖವನ್ನು ಧರಿಸಿತು. ಆದರೆ, ಈ ಆಧುನಿಕತೆಯ ಅಡಿಯಲ್ಲಿ ವಸಾಹತುಶಾಹಿಯ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬಿತ್ತನೆಗಳು ಅಡಕವಾಗಿವೆ. ಈ ಬಿತ್ತನೆಗಳು ಇಂದು ಸಹ ನಗರ ಜೀವನದ ಪ್ರತಿಯೊಂದು ಅಂಶದಲ್ಲಿ ಕಾಣಿಸಿಕೊಳ್ಳುತ್ತಿವೆ. ಬೆಂಗಳೂರು ನಗರದ ವಸಾಹತುಶಾಹಿ ಪರಂಪರೆ ಒಂದು ಇತಿಹಾಸಾತ್ಮಕ ಪ್ರಕ್ರಿಯೆಯ ಫಲವಾಗಿದೆ. ಬ್ರಿಟಿಷ್ ಆಡಳಿತದ ಕಾಲಮಾನದಲ್ಲಿ ಸ್ಥಾಪಿಸಲ್ಪಟ್ಟ ಕ್ಯಾಂಟೋನ್ಮೆಂಟ್ ಪ್ರದೇಶವು ವಸಾಹತು ಆಡಳಿತದ ಒಂದು ಶಕ್ತಿಕೇಂದ್ರವಾಗಿ ರೂಪುಗೊಂಡಿತು. ಈ ಪ್ರದೇಶದ ವಿನ್ಯಾಸ, ಕಟ್ಟಡ ಶೈಲಿ, ರಸ್ತೆ ವ್ಯವಸ್ಥೆ, ಶಿಕ್ಷಣ ಸಂಸ್ಥೆಗಳು ಮತ್ತು ಆಡಳಿತ ಕ್ರಮಗಳು ಪಾಶ್ಚಾತ್ಯ ಮಾದರಿಯ ಪ್ರತಿಬಿಂಬಗಳಾಗಿದ್ದವು. ಇದರ ವಿರುದ್ಧವಾಗಿ, ಪೇಟೆ ಪ್ರದೇಶಗಳು ಭಾರತೀಯ ಜನಸಮೂಹದ ವಾಸಸ್ಥಳವಾಗಿ ಉಳಿದವು. ಈ ರೀತಿಯ ಸಾಮಾಜಿಕ–ಭೌಗೋಳಿಕ ವಿಭಜನೆಯು ನಗರದ ದೀರ್ಘಕಾಲೀನ

ಸಾಮಾಜಿಕ ಅಸಮಾನತೆಯ ಮೂಲವಾಯಿತು.

ವಸಾಹತುಶಾಹಿಯ ಪ್ರಭಾವವು ಬೆಂಗಳೂರಿನ ನಗರ ಯೋಜನೆ, ಆಡಳಿತ, ಶಿಕ್ಷಣ, ಆರ್ಥಿಕತೆಯಷ್ಟೇ ಅಲ್ಲದೆ ಜನಜೀವನದ ಸಾಂಸ್ಕೃತಿಕ ಆಯಾಮಗಳಲ್ಲಿಯೂ ಆಳವಾಗಿದೆ. ಇಂಗ್ಲಿಷ್ ಭಾಷೆಯ ಪ್ರಾಬಲ್ಯ, ಪಾಶ್ಚಾತ್ಯ ಶಿಕ್ಷಣ, ಪಾಶ್ಚಾತ್ಯ ಶೈಲಿಯ ವಸತಿಗಳು ಹಾಗೂ ಸಾಮಾಜಿಕ ಸಂಸ್ಕಾರಗಳು ನಗರವನ್ನು ಪಾಶ್ಚಾತ್ಯ ಆಧುನಿಕತೆಯ ಮಾದರಿಯನ್ನಾಗಿ ಮಾಡಿವೆ. ಆದರೆ ಈ ಮಾದರಿಯು ಸ್ಥಳೀಯ ಸಂಸ್ಕೃತಿ ಮತ್ತು ಪರಿಸರದ ಮೇಲೆ ಪರಿಣಾಮ ಬೀರಿದೆ ಎಂಬುದನ್ನು ನಿರ್ಲಕ್ಷಿಸಲಾಗಲಾರದು. ಇಂದಿನ ಗ್ಲೋಬಲ್ ಬೆಂಗಳೂರು ವಾಸ್ತವವಾಗಿ ವಸಾಹತುಶಾಹಿ ನಗರ ಮಾದರಿಯ ನವೀಕೃತ ರೂಪವಾಗಿದೆ. ಐಟಿ ಉದ್ಯಮ, ಗ್ಲೋಬಲ್ ಬಂಡವಾಳ ಹೂಡಿಕೆಗಳು, ಆಂಗ್ಲೀಕೃತ ಶಿಕ್ಷಣ ವ್ಯವಸ್ಥೆ ಮತ್ತು ನಗರ ಅಭಿವೃದ್ಧಿ ನೀತಿಗಳು ಎಲ್ಲವೂ ನವವಸಾಹತುಶಾಹಿಯ ನವತಂತುಗಳನ್ನು ಪ್ರತಿನಿಧಿಸುತ್ತವೆ. ಈ ನೆಲೆ ಮತ್ತು ಹಿನ್ನೆಲೆಯಲ್ಲೇ ಆಧುನಿಕ ಬೆಂಗಳೂರಿನ ವಸಾಹತುಶಾಹಿ ಪರಂಪರೆ ಎಂಬ ವಿಷಯದ ಪ್ರಸ್ತುತ ಅಧ್ಯಯನವು ನಗರ ಅಭಿವೃದ್ಧಿಯ ಸಾಮಾಜಿಕ, ಇತಿಹಾಸಾತ್ಮಕ ಮತ್ತು ಸಾಂಸ್ಕೃತಿಕ ವಿಶ್ಲೇಷಣೆಗೆ ಮಾರ್ಗದರ್ಶಕವಾಗುತ್ತದೆ. ಈ ಅಧ್ಯಯನದ ಉದ್ದೇಶವು ವಸಾಹತುಶಾಹಿಯ ಪ್ರಭಾವದಿಂದ ರೂಪುಗೊಂಡ ಬೆಂಗಳೂರಿನ ಭೌಗೋಳಿಕ, ಆಡಳಿತಾತ್ಮಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿವರ್ತನೆಗಳನ್ನು ವಿಶ್ಲೇಷಿಸುವುದು; ಜೊತೆಗೆ ಆ ಪರಂಪರೆಯು ಇಂದಿನ ನಗರ ಜೀವನದಲ್ಲಿ ಹೇಗೆ ಮುಂದುವರಿದಿದೆ ಎಂಬುದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ತಿಳಿಸುವುದಾಗಿದೆ.

**ವಸಾಹತುಶಾಹಿ ಪರಂಪರೆಯ ಪ್ರಮುಖ ಅಂಶಗಳು**

ಬೆಂಗಳೂರು ನಗರವು ವಸಾಹತು ಕಾಲಮಾನದ ಶಿಲ್ಪ, ಆಡಳಿತ, ಶಿಕ್ಷಣ, ಮತ್ತು ನಗರ ಸಂಸ್ಕೃತಿಯ ಬಲವಾದ ಗುರುತುಗಳನ್ನು ಇಂದಿಗೂ ಹೊತ್ತಿದೆ. ಬ್ರಿಟಿಷರ ಪ್ರಭಾವವು ಈ ನಗರವನ್ನು ಭಾರತದ ಇಂಗ್ಲಿಷ್ ಪರಂಪರೆ ನಗರಗಳಲ್ಲಿ ಒಂದಾಗಿ ಪರಿವರ್ತಿಸಿತು. ವಸಾಹತುಶಾಹಿಯ ಈ ಪರಂಪರೆಯು ಹಲವಾರು ಮುಖಗಳಲ್ಲಿ ಕಾಣಿಸುತ್ತದೆ. ವಾಸ್ತುಶಿಲ್ಪ, ಆಡಳಿತ ವ್ಯವಸ್ಥೆ, ಶಿಕ್ಷಣ ಮತ್ತು ಸಾಮಾಜಿಕ ರಚನೆಯು ಕಂಡುಬರುತ್ತದೆ.

**ವಸಾಹತುಶಾಹಿ ವಾಸ್ತುಶಿಲ್ಪ (Colonial Architecture):** ಬೆಂಗಳೂರು ನಗರದಲ್ಲಿ ಬ್ರಿಟಿಷ್ ವಸಾಹತುಶಾಹಿ ವಾಸ್ತುಶಿಲ್ಪದ ಅನೇಕ ಉದಾಹರಣೆಗಳು ಇಂದಿಗೂ ಶಾಶ್ವತವಾಗಿ ಉಳಿದಿವೆ. ಈ ಕಟ್ಟಡಗಳು ಯೂರೋಪಿಯನ್ ಶೈಲಿಯ ವಿನ್ಯಾಸ, ಶಿಲ್ಪಕಲೆ ಮತ್ತು ಸ್ಥಳ ಆಯೋಜನೆಯ ಮಾದರಿಗಳನ್ನು ಪ್ರತಿನಿಧಿಸುತ್ತವೆ.

**ಸಿವಿಲ್ ಕೋರ್ಟ್ (Civil Court Building):** 1868ರಲ್ಲಿ ನಿರ್ಮಿಸಲ್ಪಟ್ಟ ಈ ಕಟ್ಟಡವು ಗ್ರೀಕ್ ಶೈಲಿಯ Doric Columns ಮತ್ತು ಎತ್ತರದ ವೃತ್ತಾಕಾರದ ಗುಂಬಜದಿಂದ ವಿನ್ಯಾಸಗೊಂಡಿದೆ. ಇದು ಬ್ರಿಟಿಷ್ ನ್ಯಾಯಾಂಗದ ಭೌತಿಕ ಪ್ರತೀಕವಾಗಿತ್ತು.

ಅಟಾರ್ನಿ ಜನರಲ್ ಕಚೇರಿ (Attorney General’s Office) – ವಿಕ್ಟೋರಿಯನ್ ಶೈಲಿಯ ಈ ಕಟ್ಟಡವು ಬ್ರಿಟಿಷ್ ಆಡಳಿತದ ಅಧಿಕಾರ ಮತ್ತು ವೈಭವವನ್ನು ತೋರಿಸುತ್ತದೆ.

**ಬೆಂಗಳೂರು ಕ್ಯಾಂಟೋನ್ಮೆಂಟ್‌ನ ಚರ್ಚುಗಳು:** St. Mark’s Cathedral, Holy Trinity Church, St. John’s Church ಮುಂತಾದ ಚರ್ಚುಗಳು ಆಂಗ್ಲರ ಶೈಲಿಯ ಚರ್ಚು ವಾಸ್ತುಶಿಲ್ಪದ ಮಾದರಿಗಳಾಗಿವೆ. ಈ ಎಲ್ಲ ಕಟ್ಟಡಗಳು ಕೇವಲ ಶಿಲ್ಪಕೃತಿಗಳು ಮಾತ್ರವಲ್ಲ, ಅವು ಬ್ರಿಟಿಷರ ಸಾಂಸ್ಕೃತಿಕ ಪ್ರಾಬಲ್ಯದ ದೃಶ್ಯರೂಪಗಳಾಗಿವೆ. ಅವು ಶಾಸಕ–

ಶಾಸಿತ ಮನೋಭಾವದ ಸ್ಮಾರಕಗಳಾಗಿ ಉಳಿದಿವೆ.

**ನಗರ ಯೋಜನೆ ಮತ್ತು ರಸ್ತೆ ವಿನ್ಯಾಸ:** ವಸಾಹತು ಕಾಲದಲ್ಲಿ ಬೆಂಗಳೂರಿನಲ್ಲಿ ಕ್ಯಾಂಟೋನ್ಮೆಂಟ್–ಪೇಟೆ ವಿಭಜನೆ ಎಂಬ ವಿಶಿಷ್ಟ ನಗರ ವಿನ್ಯಾಸವನ್ನು ಅಳವಡಿಸಲಾಯಿತು. ಕ್ಯಾಂಟೋನ್ಮೆಂಟ್ ಪ್ರದೇಶವು ಯೂರೋಪಿಯನ್ ಶೈಲಿಯ ವಿಶಾಲ ರಸ್ತೆ, ಬಂಗಲೆ ಮತ್ತು ಉದ್ಯಾನಗಳೊಂದಿಗೆ ವಿನ್ಯಾಸಗೊಂಡಿತ್ತು. ಪೇಟೆ ಪ್ರದೇಶವು ಭಾರತೀಯ ಜನಸಮೂಹದ ವಸತಿಗೃಹವಾಗಿ ಉಳಿಯಿತು. ಈ ವಿನ್ಯಾಸವು ನಗರದಲ್ಲಿ ಸಾಮಾಜಿಕ ಮತ್ತು ಆರ್ಥಿಕ ವಿಭಜನೆಯನ್ನು ದೃಢಪಡಿಸಿತು.

**ಆಡಳಿತ ಮತ್ತು ನ್ಯಾಯಾಂಗ ವ್ಯವಸ್ಥೆ:** ಬ್ರಿಟಿಷರು ಬೆಂಗಳೂರಿನಲ್ಲಿ ಆಧುನಿಕ ಆಡಳಿತ ಕ್ರಮವನ್ನು ಪರಿಚಯಿಸಿದರು. ನ್ಯಾಯಾಂಗ, ಪೋಲಿಸ್, ಮತ್ತು ಪುರಸಭೆ ವ್ಯವಸ್ಥೆಗಳು ಇಂಗ್ಲಿಷ್ ಮಾದರಿಯ ಮೇರೆಗೆ ರೂಪಿಸಲ್ಪಟ್ಟವು. ಸಿವಿಲ್ ಕೋರ್ಟ್ ಮತ್ತು ಸ್ಮಾಲ್ ಕಾಸಸ್ ಕೋರ್ಟ್ ವ್ಯವಸ್ಥೆಗಳು ನ್ಯಾಯಾಂಗದ ಪಾಶ್ಚಾತ್ಯ ವಿನ್ಯಾಸದ ಭಾಗವಾಗಿದ್ದವು. ಪುರಸಭೆ (Municipal Administration) ಪ್ರಾರಂಭವಾದದ್ದು 1862ರಲ್ಲಿ, ಇದು ಸ್ಥಳೀಯ ಆಡಳಿತದ ಮೊದಲ ರೂಪವಾಗಿತ್ತು.

**ಶಿಕ್ಷಣ ಮತ್ತು ಸಾಂಸ್ಕೃತಿಕ ಸಂಸ್ಥೆಗಳು:** ಬ್ರಿಟಿಷರು ಬೆಂಗಳೂರಿನಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಪಾಶ್ಚಾತ್ಯ ಶಿಕ್ಷಣ ಪರಂಪರೆಯನ್ನು ಬಿತ್ತಿದರು. Bishop Cotton School (1865), St. Joseph's College (1882), Mount Carmel College ಮುಂತಾದವುಗಳು ಅದರ ಉದಾಹರಣೆಗಳಾಗಿವೆ. ಈ ಸಂಸ್ಥೆಗಳು ನಗರದಲ್ಲಿ ಇಂಗ್ಲಿಷ್ ಶಿಕ್ಷಣ ಮತ್ತು ಪಾಶ್ಚಾತ್ಯ ಜೀವನ ಶೈಲಿಯನ್ನು ವಿಸ್ತರಿಸಿತು. ಈ ವಿದ್ಯಾ ಪರಂಪರೆ ಇಂದಿಗೂ ನಗರ ಸಂಸ್ಕೃತಿಯ ಮೂಲಸ್ತಂಭವಾಗಿದೆ.

**ಆರ್ಥಿಕ ಮತ್ತು ಸಾಮಾಜಿಕ ವಿನ್ಯಾಸ:** ಬ್ರಿಟಿಷರ ಆಡಳಿತದ ಕಾಲಮಾನದಲ್ಲಿ ಬೆಂಗಳೂರು ಸೇನಾ ಮತ್ತು ವ್ಯಾಪಾರ ಕೇಂದ್ರವಾಗಿ ರೂಪುಗೊಂಡಿತು. ಕ್ಯಾಂಟೋನ್ಮೆಂಟ್ ಪ್ರದೇಶದ ಸುತ್ತ ವ್ಯಾಪಾರ, ಹೋಟೆಲ್, ಸಾರಿಗೆ ಮತ್ತು ಕಾರ್ಮಿಕ ಸೇವೆಗಳ ಅಭಿವೃದ್ಧಿಯನ್ನು ಕಂಡಿತು. ನಗರದಲ್ಲಿ ವರ್ಗಾಧಾರಿತ ಉದ್ಯೋಗ ವಿನ್ಯಾಸ (Class–based Employment) ಸ್ಥಾಪನೆಯಾಯಿತು. ಇದು ವಸಾಹತುಶಾಹಿಯ ಆರ್ಥಿಕ ರಚನೆಯ ಲಕ್ಷಣವಾಗಿತ್ತು.

**ತೋಟಗಳು ಮತ್ತು ಹಸಿರು ಪ್ರದೇಶಗಳು:** ಬ್ರಿಟಿಷರು Garden City ತತ್ವದ ಪ್ರಕಾರ; ಬೆಂಗಳೂರನ್ನು ವಿನ್ಯಾಸಗೊಳಿಸಿದರು. ಲಾಲ್ ಬಾಗ್, ಕಬ್ಬನ್ ಪಾರ್ಕ್ ಮುಂತಾದ ತೋಟಗಳು ಯೂರೋಪಿಯನ್ ನಗರ ವಿನ್ಯಾಸದ ಮಾದರಿಗಳನ್ನು ಅನುಸರಿಸಿದವು. ಹಸಿರು ಪ್ರದೇಶಗಳ ನಿರ್ಮಾಣವು ಬ್ರಿಟಿಷರ ಆರೋಗ್ಯ ಮತ್ತು ಸೌಂದರ್ಯ ಕಾಳಜಿಯ ಸಂಕೇತವಾಗಿದ್ದರೂ, ಇದು ಸ್ಥಳೀಯ ವಸತಿ ಪ್ರದೇಶಗಳ ಅತಿಕ್ರಮಣಕ್ಕೂ ಕಾರಣವಾಯಿತು.

**ಭಾಷಾ ಮತ್ತು ಸಾಂಸ್ಕೃತಿಕ ಪ್ರಭಾವ:** ಬ್ರಿಟಿಷರ ಆಡಳಿತದ ಫಲವಾಗಿ ಇಂಗ್ಲಿಷ್ ಭಾಷೆ ನಗರ ಸಂಸ್ಕೃತಿಯ ಮುಖ್ಯ ಭಾಷೆಯಾಯಿತು. ಕ್ಯಾಂಟೋನ್ಮೆಂಟ್ ಪ್ರದೇಶದಲ್ಲಿ ಇಂಗ್ಲಿಷ್ ಆಡಳಿತ ಭಾಷೆಯಾಗಿ ಸ್ಥಾಪಿಸಲ್ಪಟ್ಟಿತು. ಪಾಶ್ಚಾತ್ಯ ಸಂಗೀತ, ಆಹಾರ ಪದ್ಧತಿ, ಮತ್ತು ಸಾಮಾಜಿಕ ವರ್ತನೆಗಳು ನಗರ ಜೀವನದ ಭಾಗವಾಯಿತು. ಈ ಎಲ್ಲಾ ಅಂಶಗಳು ಬೆಂಗಳೂರಿನ ವಸಾಹತುಶಾಹಿ ಪರಂಪರೆಯ ಜೀವಂತ ಸಾಕ್ಷಿಗಳಾಗಿವೆ. ವಾಸ್ತುಶಿಲ್ಪದಿಂದ ಹಿಡಿದು ಶಿಕ್ಷಣ, ಆಡಳಿತದಿಂದ ಹಿಡಿದು ಸಂಸ್ಕೃತಿವರೆಗೂ ಬ್ರಿಟಿಷರ ಪ್ರಭಾವದ ಗುರುತುಗಳು ಇಂದಿಗೂ ಅಳಿಸಲ್ಪಟ್ಟಿಲ್ಲ. ಆಧುನಿಕ ಬೆಂಗಳೂರು ಗ್ಲೋಬಲ್ ಸಿಟಿಯಾಗಿದ್ದರೂ, ಅದರ

ಹೃದಯದಲ್ಲಿ ವಸಾಹತುಶಾಹಿಯ ಪರಂಪರೆ ಬೇರೂರಿದೆ.

**ಸಾಮಾಜಿಕ ಮತ್ತು ಆರ್ಥಿಕ ಪ್ರಭಾವ:** ಆಧುನಿಕ ಬೆಂಗಳೂರಿನ ವಸಾಹತುಶಾಹಿ ಪರಂಪರೆ ನಗರದ ಅಭಿವೃದ್ಧಿ, ಸಂಸ್ಕೃತಿ ಮತ್ತು ಸಮಾಜದ ಮೇಲೆ ಆಳವಾದ ಪ್ರಭಾವ ಬೀರಿದೆ. ಬ್ರಿಟಿಷ್ ವಸಾಹತುಶಾಹಿ ಯುಗದಲ್ಲಿ ನಗರಯೋಜನೆ, ವಾಸ್ತುಶಿಲ್ಪ, ಆಡಳಿತ ಮತ್ತು ಸಾಮಾಜಿಕ ರಚನೆಗಳಲ್ಲಿ ಹೊಸ ರೀತಿಯ ಬದಲಾವಣೆಗಳು ಜಾರಿಗೆ ಬಂದವು. ಈ ಬದಲಾವಣೆಗಳು ಸ್ಥಳೀಯ ಜನರ ಜೀವನಶೈಲಿ, ವಾಸಸ್ಥಳ, ಉದ್ಯೋಗ ಮತ್ತು ಆರ್ಥಿಕ ಸ್ಥಿತಿಗೆ ನೇರ ಪರಿಣಾಮ ಬೀರಿದವು.

**ಸ್ಥಳಾಂತರ ಮತ್ತು ವಸತಿಗೃಹದ ವಿಭಜನೆ:** ವಸಾಹತುಶಾಹಿ ಆಡಳಿತದ ನಗರ ಯೋಜನೆಯು ಸ್ಥಳೀಯ ಜನಸಂಖ್ಯೆಯ ಸ್ಥಳಾಂತರಕ್ಕೆ ಕಾರಣವಾಯಿತು. ಕ್ಯಾಂಟೋನ್ಮೆಂಟ್ ಪ್ರದೇಶ ನಿರ್ಮಾಣದ ವೇಳೆಯಲ್ಲಿ ಅನೇಕ ಸ್ಥಳೀಯ ಗ್ರಾಮಗಳು ಮತ್ತು ವಸತಿಗಳು ತೆರವುಗೊಳಿಸಲ್ಪಟ್ಟವು. ಸ್ಥಳೀಯರು ಪೇಟೆ ಮತ್ತು ಹೊರವಲಯ ಪ್ರದೇಶಗಳಿಗೆ ಸ್ಥಳಾಂತರ ಗೊಂಡರು. ಇದರಿಂದ ಯೂರೋಪಿಯನ್ ವಲಯ ಮತ್ತು ಸ್ಥಳೀಯ ವಲಯ ಎಂಬ ಸ್ಪಷ್ಟ ವಿಭಜನೆ ಉಂಟಾಯಿತು. ಈ ವಿಭಜನೆ ಅನಂತರದ ನಗರ ಅಭಿವೃದ್ಧಿಯಲ್ಲಿಯೂ ವರ್ಗಾಧಾರಿತ ವಾಸಸ್ಥಳ ವಿನ್ಯಾಸಕ್ಕೆ ಕಾರಣವಾಯಿತು.

**ಆರ್ಥಿಕ ವಿನ್ಯಾಸ ಮತ್ತು ಉದ್ಯೋಗದ ಬದಲಾವಣೆ:** ಬ್ರಿಟಿಷ್ ಆಡಳಿತದ ಪ್ರಭಾವದಿಂದ ಬೆಂಗಳೂರಿನ ಆರ್ಥಿಕತೆಯು ಕೃಷಿ ಆಧಾರಿತದಿಂದ ನಗರ ಸೇವಾ ಆಧಾರಿತ ಆರ್ಥಿಕತೆಯಾಗಿ ಪರಿವರ್ತಿತವಾಯಿತು. ಕ್ಯಾಂಟೋನ್ಮೆಂಟ್ ಪ್ರದೇಶದ ಅಗತ್ಯಗಳಿಗೆ ಕಾರ್ಮಿಕ ವರ್ಗ, ಗುತ್ತಿಗೆದಾರರು, ಪೂರೈಕೆದಾರರು ಮತ್ತು ವ್ಯಾಪಾರಿಗಳು ಹೊಸ ಉದ್ಯೋಗ ಕ್ಷೇತ್ರಗಳನ್ನು ಹೊಂದಿದರು. ಸ್ಥಳೀಯ ಕೈಗಾರಿಕೆಗಳು (ಉದಾಹರಣೆಗೆ: ನೇಕಾರಿಕೆ, ಚರ್ಮ ಕೆಲಸ, ಮರ ಕೆಲಸ) ವಸಾಹತು ಬಂಡವಾಳದ ಎದುರು ಕುಗ್ಗಿದವು. ಹೊಸ ಆರ್ಥಿಕ ಶಕ್ತಿಕೇಂದ್ರಗಳು ಪಾಶ್ಚಾತ್ಯ ಮಾದರಿಯ ವ್ಯಾಪಾರ ಮತ್ತು ಸೇವಾ ಕ್ಷೇತ್ರಗಳಲ್ಲಿ ಹುಟ್ಟಿಕೊಂಡವು.

**ಶಿಕ್ಷಣ ಮತ್ತು ಸಾಮಾಜಿಕ ವರ್ಗೀಕರಣ –** ವಸಾಹತು ಆಡಳಿತದ ಕಾಲಮಾನದಲ್ಲಿ ಪ್ರಾರಂಭವಾದ ಆಂಗ್ಲ ಶಿಕ್ಷಣವು ಹೊಸ ಮಧ್ಯಮ ವರ್ಗವನ್ನು (Educated Middle Class) ಹುಟ್ಟುಹಾಕಿತು. ಇಂಗ್ಲಿಷ್ ಶಿಕ್ಷಣ ಪಡೆದವರು ಆಡಳಿತ, ಲೆಕ್ಕಪತ್ರ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಉದ್ಯೋಗ ಪಡೆದರು. ಆದರೆ, ಈ ಪ್ರಗತಿ ಎಲ್ಲ ವರ್ಗಗಳಿಗೆ ಸಮಾನವಾಗಿ ಲಭ್ಯವಾಗಲಿಲ್ಲ. ದಲಿತರು, ಮಹಿಳೆಯರು ಮತ್ತು ಹಿಂದುಳಿದ ವರ್ಗಗಳು ಶಿಕ್ಷಣ ದಿಂದ ದೂರ ಉಳಿಯಬೇಕಾಯಿತು. ಹೀಗಾಗಿ ಸಾಮಾಜಿಕ ಅಸಮಾನತೆ ಮತ್ತಷ್ಟು ಬಲಗೊಂಡಿತು.

**ಸಂಸ್ಕೃತಿಯ ಪಾಶ್ಚಾತ್ಯೀಕರಣ –** ಬ್ರಿಟಿಷ್ ವಸಾಹತುಶಾಹಿಯ ಪ್ರಭಾವದಿಂದ ನಗರದ ಸಂಸ್ಕೃತಿ ಪಾಶ್ಚಾತ್ಯ ಶೈಲಿಯತ್ತ ತಿರುಗಿತು. ಕಾಫಿ ಹೌಸ್ ಸಂಸ್ಕೃತಿ, ಕ್ಲಬ್‌ಗಳು, ಕ್ರೀಡಾಂಗಣಗಳು, ಚರ್ಚು ಚಟುವಟಿಕೆಗಳು ಮತ್ತು ಪಾಶ್ಚಾತ್ಯ ಉಡುಗೆ ನಗರ ಜೀವನದ ಭಾಗವಾಯಿತು. ಸ್ಥಳೀಯ ಕಲೆ, ಭಾಷೆ ಮತ್ತು ಆಚರಣೆಗಳು ನಗರದಲ್ಲಿ ಹಿಂಜರಿಯುವ ಸ್ಥಿತಿಗೆ ಬಂದವು. ಈ ಪ್ರಭಾವ ಇಂದಿನ ಕಾಸ್ಮೋಪಾಲಿಟನ್ ಬೆಂಗಳೂರು ಸಾಮಾಜಿಕ ನೈಜತೆಯ ಮೂಲವಾಗಿದೆ.

**ವರ್ಗ ಮತ್ತು ಸ್ಥಳೀಯ ಅಸಮಾನತೆಗಳು –** ವಸಾಹತು ಕಾಲಮಾನದ ನಗರ ವಿನ್ಯಾಸವು ಇಂದು ಸಹ ಕಾಣುವ ಸಾಮಾಜಿಕ–ಆರ್ಥಿಕ ಅಸಮಾನತೆಯ ಮೂಲವಾಗಿದೆ. ಕ್ಯಾಂಟೋನ್ಮೆಂಟ್ ಪ್ರದೇಶಗಳು ಅಭಿವೃದ್ಧಿಯ ಕೇಂದ್ರವಾಗಿದ್ದರೆ, ಪೇಟೆ ಮತ್ತು

ಹೊರವಲಯಗಳು ನಿಧಾನವಾಗಿ ಬೆಳೆಯುತ್ತಿವೆ. ರಸ್ತೆ, ನೀರು, ವಿದ್ಯುತ್ ಮತ್ತು ಸಾರ್ವಜನಿಕ ಸೌಲಭ್ಯಗಳಲ್ಲಿ ಈ ಅಸಮಾನತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ವಸಾಹತು ಮಾದರಿ ಇಂದಿನ ನಗರ ಯೋಜನೆಗಳಲ್ಲಿಯೂ ಮುಂದುವರಿದಿದೆ.

**ನವವಸಾಹತುಶಾಹಿಯ ಪ್ರಭಾವ** – ಸ್ವಾತಂತ್ರ್ಯದ ಅನಂತರವೂ ವಸಾಹತು ಮಾದರಿಯ ಆರ್ಥಿಕ ಮತ್ತು ಸಾಂಸ್ಕೃತಿಕ ವಿನ್ಯಾಸವು ಹೊಸ ರೂಪದಲ್ಲಿ ಮುಂದುವರಿಯಿತು. ಬಹುರಾಷ್ಟ್ರೀಯ ಕಂಪನಿಗಳು, ಗ್ಲೋಬಲ್ ಬಂಡವಾಳ, ಆಂಗ್ಲ ಶಿಕ್ಷಣ ಮತ್ತು ಪಾಶ್ಚಾತ್ಯ ಜೀವನಶೈಲಿ ಇಂದಿನ ಬೆಂಗಳೂರಿನ ಹೊಸ ಗುರುತಾಗಿವೆ. ಹೀಗಾಗಿ ಆಧುನಿಕತೆ ಎನ್ನುವ ಹೆಸರಿನಲ್ಲಿ ವಸಾಹತುಶಾಹಿಯ ಹೊಸ ರೂಪ ನವವಸಾಹತುಶಾಹಿ (Neo–Colonialism) ನಗರದಲ್ಲಿ ಬೇರೂರಿದೆ. ಆಧುನಿಕ ಬೆಂಗಳೂರಿನ ವಸಾಹತುಶಾಹಿ ಪರಂಪರೆ ಕೇವಲ ಇತಿಹಾಸದ ಅವಶೇಷವಲ್ಲ; ಅದು ನಗರ ಜೀವನದ ಜೀವಂತ ಭಾಗವಾಗಿದೆ. ಸ್ಥಳಾಂತರ, ವರ್ಗೀಯ ವಿಭಜನೆ, ಪಾಶ್ಚಾತ್ಯ ಶಿಕ್ಷಣ ಮತ್ತು ಸಂಸ್ಕೃತಿಯ ಪ್ರಭಾವಗಳು ಇಂದಿನ ನಗರದಲ್ಲಿ ಸ್ಪಷ್ಟವಾಗಿ ಕಾಣುತ್ತವೆ. ಈ ಎಲ್ಲ ಅಂಶಗಳು ವಸಾಹತುಶಾಹಿಯ ದೀರ್ಘಕಾಲೀನ ಸಾಮಾಜಿಕ–ಆರ್ಥಿಕ ಪರಿಣಾಮಗಳ ಜೀವಂತ ಸಾಕ್ಷಿಗಳಾಗಿವೆ.

**ನಗರ ಯೋಜನೆ ಮತ್ತು ವಾಸ್ತುಶಿಲ್ಪ:** ವಸಾಹತುಶಾಹಿ ಪ್ರಭಾವದ ವಿಶ್ಲೇಷಣೆ – ಆಧುನಿಕ ಬೆಂಗಳೂರಿನ ನಗರ ಯೋಜನೆ ಮತ್ತು ವಾಸ್ತುಶಿಲ್ಪದ ವಿನ್ಯಾಸದಲ್ಲಿ ಬ್ರಿಟಿಷ್ ವಸಾಹತುಶಾಹಿ ಪ್ರಭಾವ ಸ್ಪಷ್ಟವಾಗಿ ಗೋಚರಿಸುತ್ತದೆ. ಬ್ರಿಟಿಷರು ನಾಗರಿಕ ಮತ್ತು ಮಿಲಿಟರಿ ನಿಲ್ದಾಣ (Civil and Military Station) ಎಂಬ ವಿಭಜಿತ ನಗರ ರಚನೆಯನ್ನು ಸ್ಥಾಪಿಸಿದರು. ಈ ವ್ಯವಸ್ಥೆಯಲ್ಲಿ ನಗರವನ್ನು ಎರಡು ವಿಭಾಗಗಳಾಗಿ ವಿಭಜಿಸಲಾಯಿತು. ಮಿಲಿಟರಿ ನಿಲ್ದಾಣವು ಯುರೋಪಿಯನ್ ಸೈನಿಕರ ಹಾಗೂ ಅಧಿಕಾರಿಗಳ ವಾಸಸ್ಥಳ. ಪೇಟೆ ಪ್ರದೇಶಗಳು ಸ್ಥಳೀಯ ಜನರ ವಾಸಸ್ಥಳ. ಈ ವಿಭಾಗೀಕರಣವು ಸಾಮಾಜಿಕ ವರ್ಗೀಕರಣವನ್ನು ಬಲಪಡಿಸಿ, ನಗರದಲ್ಲಿ ವರ್ಣ–ವರ್ಗದ ಆಧಾರದ ಮೇಲೆ ಪ್ರತ್ಯೇಕತೆಯ ನೀತಿಯನ್ನು ರೂಪಿಸಿತು. ಇಲ್ಲಿನ ಯೋಜಿತ ವಿನ್ಯಾಸವು ಬ್ರಿಟಿಷರು ರೂಪಿಸಿದ ನಗರ ವಿನ್ಯಾಸವು ಯುರೋಪಿಯನ್ ನಗರ ಯೋಜನಾ ತತ್ವಗಳನ್ನು ಪ್ರತಿಬಿಂಬಿಸುತ್ತದೆ. ಕ್ಲೀವ್‌ಲ್ಯಾಂಡ್ ಟೌನ್, ರಿಚ್‌ಮಂಡ್ ಟೌನ್, ಫ್ರೇಸರ್ ಟೌನ್, ಶಾಂತಿ ರಸ್ತೆ ಹಾಗೂ ಕಂಟೋನ್ಮೆಂಟ್ ಪ್ರದೇಶಗಳು ಎಲ್ಲವೂ ವಿಶಾಲ ರಸ್ತೆಗಳು, ಸರಿಯಾದ ಚರಂಡಿ ವ್ಯವಸ್ಥೆ, ಪಾರ್ಕ್‌ಗಳು ಮತ್ತು ಸಾರ್ವಜನಿಕ ಸ್ಥಳಗಳೊಂದಿಗೆ ವಿನ್ಯಾಸಗೊಂಡಿದ್ದವು.

**ವಸಾಹತುಶಾಹಿ ವಾಸ್ತುಶಿಲ್ಪ** – ಬ್ರಿಟಿಷರು ನಿರ್ಮಿಸಿದ ಕಟ್ಟಡಗಳು ಮತ್ತು ಸ್ಮಾರಕಗಳು ಇಂದಿಗೂ ಬೆಂಗಳೂರಿನ ವಸಾಹತುಶಾಹಿ ಪರಂಪರೆಯ ದೃಶ್ಯ ಸಾಕ್ಷಿಗಳಾಗಿವೆ. ಉದಾಹರಣೆಗೆ; ಅಟಾರ್ನಿ ಜನರಲ್ ಕಚೇರಿ, ಸಿವಿಲ್ ಕೋರ್ಟ್, ಸೇಂಟ್ ಮಾರ್ಕ್ಸ್ ಚರ್ಚ್, ಹೈ ಕೋರ್ಟ್ (Attara Kacheri), ರಾಜಭವನ (ಹಿಂದಿನ ಬ್ರಿಟಿಷ್ ರೆಸಿಡೆನ್ಸಿ) – ಇವು ಎಲ್ಲವೂ ಬ್ರಿಟಿಷ್ ಕ್ಲಾಸಿಕಲ್ ಮತ್ತು ಗೊಥಿಕ್ ವಾಸ್ತುಶೈಲಿಯ ಮಾದರಿಗಳಾಗಿವೆ.

**ಸ್ಥಳೀಯ ಜನರ ಪ್ರಭಾವ ಮತ್ತು ಬದಲಾವಣೆ** – ಈ ವಿನ್ಯಾಸ ಮತ್ತು ಕಟ್ಟಡ ಶೈಲಿಗಳು ಸ್ಥಳೀಯ ವಾಸ್ತುಶಿಲ್ಪದ ಪರಂಪರೆಯನ್ನು ಹಿಂದಕ್ಕೆ ತಳ್ಳಿದವು. ಬ್ರಿಟಿಷರು ನಗರದ ಯೋಜನೆಯನ್ನು ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ರೂಪಿಸಿದರೆ, ಸ್ಥಳೀಯ ಜನರ ಅಗತ್ಯಗಳು ಮತ್ತು ಸಂಸ್ಕೃತಿಯನ್ನು ಕಡಿಮೆ ಪರಿಗಣಿಸಲಾಯಿತು. ಇದರ ಪರಿಣಾಮವಾಗಿ; ಸ್ಥಳೀಯ ಪೇಟೆ ಪ್ರದೇಶಗಳಲ್ಲಿ ಜನಸಂಖ್ಯಾ ಸಾಂದ್ರತೆ ಹೆಚ್ಚಿತು, ಮೂಲಸೌಕರ್ಯದಲ್ಲಿ

ಅಸಮತೋಲನ ಕಂಡು ಬಂತು, ನಗರದಲ್ಲಿ ಸಾಮಾಜಿಕ–ಆರ್ಥಿಕ ಅಸಮಾನತೆ ಬೇರೂರಿತು. ಆಧುನಿಕ ಬೆಂಗಳೂರಿನ ನಗರ ವಿನ್ಯಾಸ ಮತ್ತು ವಾಸ್ತುಶಿಲ್ಪವು ವಸಾಹತುಶಾಹಿ ಆಡಳಿತದ ಆಳವಾದ ಗುರುತುಗಳನ್ನು ಹೊತ್ತಿದೆ. ಈ ಪರಂಪರೆ ನಗರದ ಆಧುನಿಕೀಕರಣಕ್ಕೆ ಒಂದು ಪಾಯಿಂಟ್ ನೀಡಿದರೂ, ಅದು ಸಾಮಾಜಿಕ ಅಸಮಾನತೆ ಮತ್ತು ಸಂಸ್ಕೃತಿಯ ಅಂತರವನ್ನು ಬಲಪಡಿಸಿದ ಅಂಶವಾಗಿಯೂ ಉಳಿದಿದೆ.

**ಅಸಮಾನತೆಯ ಪರಂಪರೆ:** ವಸಾಹತುಶಾಹಿ ಆಡಳಿತದ ಶಾಶ್ವತ ಗುರುತು – ಆಧುನಿಕ ಬೆಂಗಳೂರಿನ ಅಭಿವೃದ್ಧಿಯ ಹಿನ್ನೆಲೆಯಲ್ಲಿ ವಸಾಹತುಶಾಹಿ ಪರಂಪರೆಯು ನಿರ್ಮಿಸಿದ ಅಸಮಾನತೆಯ ರಚನೆಯು ಇಂದು ಸಹ ನಗರದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಬ್ರಿಟಿಷ್ ಆಡಳಿತವು ನಗರವನ್ನು ಯೋಜಿಸುವಾಗ, ಸಾಮಾಜಿಕ ಹಾಗೂ ಆರ್ಥಿಕವಾಗಿ ವಿಭಿನ್ನ ವರ್ಗಗಳ ಜನರನ್ನು ಪ್ರತ್ಯೇಕಿಸಿದ ನಗರ ವಿನ್ಯಾಸವನ್ನು ಅನುಸರಿಸಿತು. ಇದರ ಪರಿಣಾಮವಾಗಿ ಅಸಮಾನತೆಯ ಪರಂಪರೆ ರೂಪುಗೊಂಡು, ಅದು ನಗರಾಭಿವೃದ್ಧಿಯ ದಿಕ್ಕನ್ನು ನಿರ್ಧರಿಸಿತು.

**ತಾರತಮ್ಯದ ವಸತಿ ನೀತಿಗಳು:** ಬ್ರಿಟಿಷ್ ಕಾಲಮಾನದಲ್ಲಿ ನಗರವು ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿತು; ಕಂಟೋನ್ಮೆಂಟ್ ಪ್ರದೇಶವು ಬ್ರಿಟಿಷರು ಹಾಗೂ ಯುರೋಪಿಯನ್ ಅಧಿಕಾರಿಗಳಿಗೆ ಮೀಸಲು, ವಿಶಾಲ ರಸ್ತೆ, ಸ್ವಚ್ಛ ನೀರಿನ ವ್ಯವಸ್ಥೆ, ವಿದ್ಯುತ್ ಮತ್ತು ಆರೋಗ್ಯ ಸೌಲಭ್ಯಗಳೊಂದಿಗೆ. ಸ್ಥಳೀಯ ಪೇಟೆ ಪ್ರದೇಶಗಳು – ಭಾರತೀಯರು ವಾಸಿಸುವ ಪ್ರದೇಶಗಳು, ಜನಸಾಂದ್ರತೆ ಹೆಚ್ಚಾಗಿದ್ದವು, ಮೂಲಸೌಕರ್ಯ ಅಲ್ಪಮಟ್ಟದಲ್ಲಿತ್ತು. ಈ ವಿಭಜನೆ ಸಾಮಾಜಿಕ ವರ್ಗೀಕರಣಕ್ಕೆ ದಾರಿ ಮಾಡಿಕೊಟ್ಟು, ನಗರದಲ್ಲಿ ವರ್ಣ ಹಾಗೂ ವರ್ಗ ಆಧಾರಿತ ತಾರತಮ್ಯವನ್ನು ಬಲಪಡಿಸಿತು.

**ಆರ್ಥಿಕ ಅಸಮಾನತೆ:** ವಸಾಹತುಶಾಹಿ ಆಡಳಿತದ ನೀತಿಗಳು ಸಂಪನ್ಮೂಲಗಳ ಅಸಮಾನ ಹಂಚಿಕೆಗೆ ಕಾರಣವಾದವು. ಉದ್ಯೋಗ, ಶಿಕ್ಷಣ ಮತ್ತು ಆರೋಗ್ಯದ ಅವಕಾಶಗಳು ಮುಖ್ಯವಾಗಿ ಬ್ರಿಟಿಷ್ ಕಂಟೋನ್ಮೆಂಟ್ ಪ್ರದೇಶಗಳಿಗೆ ಸೀಮಿತವಾಗಿದ್ದರೆ, ಸ್ಥಳೀಯ ಜನರು ಹಿಂಬಾಲಿತ ಸಮುದಾಯಗಳಲ್ಲಿ ಸಿಲುಕಿಕೊಂಡರು. ಇದರಿಂದಾಗಿ ಇಂದಿಗೂ ಬೆಂಗಳೂರು ನಗರದಲ್ಲಿ ಐಟಿ–ಕೇಂದ್ರಗಳು ಮತ್ತು ಉನ್ನತ ವರ್ಗದ ವಸತಿ ಪ್ರದೇಶಗಳು ಒಂದು ಕಡೆ, ಮತ್ತು ಅಂಚಿನಲ್ಲಿರುವ ಬಡಜನ ವಸತಿಗಳು ಮತ್ತೊಂದು ಕಡೆ ಎಂಬ ವಿಭಜನೆ ಗೋಚರಿಸುತ್ತದೆ.

**ಶಾಶ್ವತವಾದ ಪಕ್ಷಪಾತಗಳು:** ಬ್ರಿಟಿಷರ ಕಾಲಮಾನದಲ್ಲಿ ನಿರ್ಮಿತವಾದ ಆಡಳಿತ ವ್ಯವಸ್ಥೆ ಮತ್ತು ಸಾಮಾಜಿಕ ಶ್ರೇಣಿ ಇಂದಿಗೂ ನಗರ ನೀತಿ ರೂಪಣೆಯ ಮೇಲೆ ಪರಿಣಾಮ ಬೀರುತ್ತಿದೆ. ನಗರಾಭಿವೃದ್ಧಿಯ ಯೋಜನೆಗಳು ಬಹುಮಟ್ಟಿಗೆ ಉನ್ನತ ವರ್ಗದ ಹಿತಾಸಕ್ತಿಗೆ ಸೇವಿಸುತ್ತಿರುವುದನ್ನು ಕಾಣಬಹುದು. ಸಮಗ್ರ ಅಭಿವೃದ್ಧಿಯ ಪ್ರಯತ್ನಗಳು – ಇತ್ತೀಚಿನ ದಶಕಗಳಲ್ಲಿ ಸರ್ಕಾರ ಮತ್ತು ನಾಗರಿಕ ಸಂಸ್ಥೆಗಳು ಈ ಅಸಮಾನತೆಗಳನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿವೆ. ಬಸವ ವಸತಿ ಯೋಜನೆ, ಜವಾಹರ್ ನಗರ ನವೀಕರಣ ಮಿಷನ್ (JNNURM), ಬಿ. ಬಿ. ಎಂ. ಪಿ. ಶಹರಿ ಸ್ಲಮ್ ಸುಧಾರಣಾ ಯೋಜನೆಗಳು, ವಸಾಹತುಶಾಹಿ ಕಾಲಮಾನದ ಪಕ್ಷಪಾತವನ್ನು ನಿವಾರಿಸಲು ಕೈಗೊಳ್ಳಲಾಗಿರುವ ಪ್ರಯತ್ನಗಳಾಗಿವೆ. ವಸಾಹತುಶಾಹಿ ಪರಂಪರೆ ಯಿಂದ ಉಗಮಿಸಿದ ಅಸಮಾನತೆ ಬೆಂಗಳೂರಿನ ನಗರಾಭಿವೃದ್ಧಿಯಲ್ಲಿ ಆಳವಾಗಿ ಬೇರೂರಿದೆ. ಈ ಅಸಮಾನತೆಗಳನ್ನು ನಿವಾರಿಸಲು ಐತಿಹಾಸಿಕ ಅರಿವು ಮತ್ತು ಸಾಮಾಜಿಕ ನ್ಯಾಯಾಧಾರಿತ ನೀತಿಗಳ ಅಗತ್ಯ.

ಆಧುನಿಕ ಬೆಂಗಳೂರಿನ ಸಮಗ್ರ ಅಭಿವೃದ್ಧಿ ಈ ಪರಂಪರೆಯ ಶೋಧನೆ ಮತ್ತು ಪರಿವರ್ತನೆಗೆ ಅವಲಂಬಿತವಾಗಿದೆ.

**ವಸಾಹತುಶಾಹಿ ಮುಕ್ತಗೊಳಿಸುವ ಪ್ರಯತ್ನಗಳು:** ಬೆಂಗಳೂರಿನ ಸಾಮಾಜಿಕ–ಸಾಂಸ್ಕೃತಿಕ ಪರಿವರ್ತನೆಯ ದಾರಿ – ಆಧುನಿಕ ಬೆಂಗಳೂರಿನಲ್ಲಿ ವಸಾಹತುಶಾಹಿ ಆಡಳಿತದ ಪರಂಪರೆ ಯಿಂದ ಉದ್ಭವಿಸಿದ ಅಸಮಾನತೆ, ಸಂಸ್ಕೃತಿಯ ವಿಲೀನ ಮತ್ತು ಜ್ಞಾನತಾತ್ವಿಕ ಏಕಾಧಿಕಾರವನ್ನು ಸವಾಲು ಮಾಡುವ ವಸಾಹತುಶಾಹಿ ಮುಕ್ತಗೊಳಿಸುವ (Decolonization) ಚಳುವಳಿ ಕ್ರಮೇಣ ವೇಗ ಪಡೆಯುತ್ತಿದೆ. ಈ ಚಳವಳಿಯು ಕೇವಲ ರಾಜಕೀಯ ಅಥವಾ ಆರ್ಥಿಕ ಪರಿವರ್ತನೆಯಲ್ಲ, ಬದಲಿಗೆ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಪುನರ್ ವ್ಯಾಖ್ಯಾನವನ್ನು ಉದ್ದೇಶಿಸುತ್ತದೆ.

**ಸಂಸ್ಥೆಗಳ ಪುನರ್‌ವ್ಯವಸ್ಥೆ:** ಬೆಂಗಳೂರಿನ ಹಲವು ಶಿಕ್ಷಣ ಸಂಸ್ಥೆಗಳು ಮತ್ತು ಸಂಶೋಧನಾ ಕೇಂದ್ರಗಳು ಈಗ ವಸಾಹತುಶಾಹಿ ಬೌದ್ಧಿಕ ಮಾದರಿಗಳಿಂದ ಹೊರಬಂದು ಸ್ಥಳೀಯ ದೃಷ್ಟಿಕೋನಗಳು ಮತ್ತು ಜ್ಞಾನ ಪರಂಪರೆಯ ಮೇಲೆ ಒತ್ತು ನೀಡುತ್ತಿವೆ. ಉದಾಹರಣೆಗೆ; ವಿಶ್ವವಿದ್ಯಾಲಯಗಳಲ್ಲಿ ಸ್ಥಳೀಯ ಇತಿಹಾಸ ಮತ್ತು ಕನ್ನಡ ಅಧ್ಯಯನದ ಪ್ರಾಮುಖ್ಯತೆ ಹೆಚ್ಚಿದೆ. ಕಲಾ ಮತ್ತು ವಾಸ್ತುಶಿಲ್ಪದ ಶಿಕ್ಷಣದಲ್ಲಿ ಸ್ಥಳೀಯ ಶೈಲಿಗಳು, ಪರಂಪರೆಯ ತಂತ್ರಜ್ಞಾನ ಮತ್ತು ಶಿಲ್ಪಕಲೆಗೆ ಮಾನ್ಯತೆ ನೀಡಲಾಗುತ್ತಿದೆ.

**ಶಿಕ್ಷಣ ವ್ಯವಸ್ಥೆಯ ಪರಿವರ್ತನೆ:** ವಸಾಹತುಶಾಹಿ ಕಾಲಮಾನದಲ್ಲಿ ಶಿಕ್ಷಣ ವ್ಯವಸ್ಥೆ ಬ್ರಿಟಿಷ್ ಮೌಲ್ಯಗಳು ಮತ್ತು ಯೂರೋಪಿಯನ್ ಬೌದ್ಧಿಕ ಪರಂಪರೆಯನ್ನು ಅನುಸರಿಸುತ್ತಿತ್ತು. ಇಂದಿನ ಪ್ರಯತ್ನಗಳು ಸ್ಥಳೀಯ ಪಠ್ಯಕ್ರಮಗಳಲ್ಲಿ ಕರ್ನಾಟಕದ ಚಿಂತಕರು, ಸಾಹಿತ್ಯ ಮತ್ತು ಸಾಮಾಜಿಕ ಚಳವಳಿಗಳ ಕುರಿತ ಪಠ್ಯವಿಷಯಗಳನ್ನು ಸೇರಿಸುವುದು. ಸ್ಥಳೀಯ ಭಾಷೆಗಳಲ್ಲಿ ಸಂಶೋಧನೆಗೆ ಉತ್ತೇಜನ ನೀಡುವುದು. ಬೌದ್ಧ, ವೀರಶೈವ ಮತ್ತು ಜನಪದ ಜ್ಞಾನ ಪರಂಪರೆಯ ಸಂರಕ್ಷಣೆಯು ಇವುಗಳ ಮೂಲಕ ವಸಾಹತುಶಾಹಿ ಶಿಕ್ಷಣದ ಏಕಾಧಿಪತ್ಯವನ್ನು ಮುರಿಯಲು ಪ್ರಯತ್ನಿಸುತ್ತಿವೆ.

**ಸಾಂಸ್ಕೃತಿಕ ನಿರೂಪಣೆಯ ನವೀಕರಣ:** ಸಾಂಸ್ಕೃತಿಕ ಕ್ಷೇತ್ರದಲ್ಲಿ ವಸಾಹತುಶಾಹಿ ಮುಕ್ತಗೊಳಿಸುವ ಚಳುವಳಿ ಬೆಂಗಳೂರಿನ ಕಲಾವಿದರು, ನಾಟಕಕಾರರು, ಮತ್ತು ಚಲನಚಿತ್ರ ನಿರ್ಮಾಪಕರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ. ಸ್ಥಳೀಯ ಇತಿಹಾಸ ಮತ್ತು ಜನಪದ ಕಥೆಗಳ ಆಧಾರದ ಮೇಲೆ ಕಲಾತ್ಮಕ ಪ್ರದರ್ಶನಗಳು ನಡೆಯುತ್ತಿವೆ. ಬ್ರಿಟಿಷ್ ಕಾಲಮಾನದ ನಾಟಕ ಹಾಗೂ ಸಾಹಿತ್ಯ ಪರಂಪರೆಯ ಬದಲಾಗಿ ಸ್ವತಂತ್ರ, ಜನಪರ ದೃಷ್ಟಿಕೋನದ ಸೃಜನಶೀಲತೆ ಬೆಳೆಯುತ್ತಿದೆ.

**ಜ್ಞಾನ ವ್ಯವಸ್ಥೆಗಳ ಮೌಲ್ಯ:** ವಸಾಹತುಶಾಹಿ ಕಾಲಮಾನದಲ್ಲಿ ಪಾಶ್ಚಾತ್ಯ ಜ್ಞಾನವನ್ನು ಪ್ರಗತಿಶೀಲ ಎಂದು ಪರಿಗಣಿಸಿದರೆ, ಸ್ಥಳೀಯ ಜ್ಞಾನವನ್ನು ಅನ್ವಯವಿಲ್ಲದ ಎಂದು ನಿರಾಕರಿಸಲಾಯಿತು. ಈಗಿನ ಪ್ರಯತ್ನಗಳು ಈ ಪಾಶ್ಚಾತ್ಯ ಏಕಾಧಿಕಾರವನ್ನು ಸವಾಲು ಮಾಡುತ್ತಿವೆ. ಸ್ಥಳೀಯ ವೈದ್ಯಕೀಯ ಪದ್ಧತಿಗಳು (ಉದಾ: ಆಯುರ್ವೇದ, ಸಿದ್ಧ, ಯೋಗ) ಮರುಸ್ಥಾಪಿತವಾಗುತ್ತಿವೆ. ನಗರ ಯೋಜನೆ ಮತ್ತು ಪರಿಸರ ಸಂರಕ್ಷಣೆಯಲ್ಲಿ ಸ್ಥಳೀಯ ಪಾರಂಪರಿಕ ತಂತ್ರಜ್ಞಾನಗಳು ಪುನರುಜ್ಜೀವನ ಪಡೆಯುತ್ತಿವೆ.

**ಐತಿಹಾಸಿಕ ಅನ್ಯಾಯಗಳ ಪರಿಹಾರ:** ವಸಾಹತುಶಾಹಿ ಕಾಲಮಾನದಲ್ಲಿ ನಡೆದ ಸಾಂಸ್ಕೃತಿಕ ಮತ್ತು ಭೌಗೋಳಿಕ ಶೋಷಣೆಗಳನ್ನು ಪರಿಹರಿಸುವ ಉದ್ದೇಶದಿಂದ,

ಸರ್ಕಾರ ಮತ್ತು ನಾಗರಿಕ ಸಂಸ್ಥೆಗಳು ಅಂಚಿನ ಸಮುದಾಯಗಳ ಅಭಿವೃದ್ಧಿ, ಸಾಂಸ್ಕೃತಿಕ ಸಂರಕ್ಷಣೆ ಮತ್ತು ಸಾಮಾಜಿಕ ನ್ಯಾಯದ ಕಡೆಗೆ ಕಾರ್ಯನಿರ್ವಹಿಸುತ್ತಿವೆ. ವಸಾಹತುಶಾಹಿ ಮುಕ್ತಗೊಳಿಸುವ ಪ್ರಯತ್ನಗಳು ಬೆಂಗಳೂರಿನಲ್ಲಿ ಸಮಾನತೆ, ಸ್ಥಳೀಯತೆಯ ಗೌರವ ಮತ್ತು ಐತಿಹಾಸಿಕ ನ್ಯಾಯವನ್ನು ಸ್ಥಾಪಿಸುವ ಉದ್ದೇಶ ಹೊಂದಿವೆ. ಈ ಚಳವಳಿ ನಗರವನ್ನು ಕೇವಲ ಆಧುನಿಕತೆಯ ಕೇಂದ್ರವಾಗಿಯೇ ಅಲ್ಲ, ಸ್ವಂತ ಸಂಸ್ಕೃತಿಯ ಅರಿವು ಮತ್ತು ಗೌರವದ ಕೇಂದ್ರವಾಗಿಯೂ ರೂಪಿಸುತ್ತಿದೆ.

**ನಗರದ ಸುಧಾರಣೆಯ ಅರ್ಥ ಮತ್ತು ಅದರ ವೈಪರಿತ್ಯಗಳು:** ಬೆಂಗಳೂರಿನ ಉದಾಹರಣೆಯೊಂದಿಗೆ ವಿಮರ್ಶಾತ್ಮಕ ವಿಶ್ಲೇಷಣೆ – ನಮ್ಮ ನಗರದಲ್ಲಿ ಟ್ರಾಫಿಕ್‌ನ ಅಟ್ಟಹಾಸದಿಂದ ವಾಹನಗಳು ನಿಧಾನವಾಗಿ ಚಲಿಸಬಹುದು. ಆದರೆ, ನಗರ ಬೆಳವಣಿಗೆಯ ವೇಗದಲ್ಲಿ ಅದು ಭಾರತದಷ್ಟೇ ಅಲ್ಲ, ವಿಶ್ವದ ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ನಗರಗಳಲ್ಲಿ ಒಂದಾಗಿದೆ. ಈ ಬೆಳವಣಿಗೆಯ ನೆಲೆ ಮತ್ತು ಹಿನ್ನೆಲೆಯಲ್ಲೇ ನಗರ ಸುಧಾರಣೆ (Urban Improvement) ಎಂಬ ಪರಿಕಲ್ಪನೆ ಜನಸಾಮಾನ್ಯರ ಮನಸ್ಸಿನಲ್ಲಿ ಪ್ರಮುಖ ಸ್ಥಾನ ಪಡೆದಿದೆ.

**ನಗರ ಸುಧಾರಣೆಯ ಸಾಂಪ್ರದಾಯಿಕ ಅರ್ಥ:** ಸಾಮಾನ್ಯವಾಗಿ ನಗರ ಸುಧಾರಣೆ ಎಂದರೆ; ರಸ್ತೆ, ನೀರು, ನೈರ್ಮಲ್ಯ, ವಸತಿ ಹಾಗೂ ಅನಿಯಮಿತ ವಸತಿಗಳ ನಿರ್ಮೂಲನೆ ಮುಂತಾದ ಮೂಲಸೌಕರ್ಯಗಳ ಅಭಿವೃದ್ಧಿ ಎಂದು ಅರ್ಥೈಸಲಾಗುತ್ತದೆ. ದಿನಪತ್ರಿಕೆಗಳು, ದೂರದರ್ಶನ ಹಾಗೂ ಸರ್ಕಾರಿ ಪ್ರಚಾರ ಮಾಧ್ಯಮಗಳಲ್ಲಿ ಇಂತಹ ಯೋಜನೆಗಳು ಜನಜೀವನದ ಗುಣಮಟ್ಟವನ್ನು ಹೆಚ್ಚಿಸುವ ಅಭಿವೃದ್ಧಿಯ ಸಂಕೇತಗಳಾಗಿ ಚಿತ್ರಿಸಲ್ಪಡುತ್ತವೆ. ಇವು ನಾಗರಿಕರಿಗೆ ಉತ್ತಮ ಸೇವೆಗಳನ್ನು ಒದಗಿಸಿ, ಅವರ ಸುತ್ತಲಿನ ಸಮಾಜವನ್ನು ಸಬಲಗೊಳಿಸುವ ಮತ್ತು ನಗರವನ್ನು ಆಧುನಿಕ ರೂಪಕ್ಕೆ ತರಲು ಉದ್ದೇಶಿತವಾಗಿರುವಂತೆ ಕಾಣುತ್ತದೆ.

**ಹೊಸ ಸಂಶೋಧನೆಯ ಬೆಳಕಿನಲ್ಲಿ ಪರಾಮರ್ಶೆ:** ಆದರೆ, ಅಮೆರಿಕಾದ ಅಮೆರಿಕನ್ ಯೂನಿವರ್ಸಿಟಿಯ ನಗರ ಭೂಗೋಳಶಾಸ್ತ್ರಜ್ಞರ ಪ್ರಕಾರ; ಹೊಸ ಐತಿಹಾಸಿಕ ಸಂಶೋಧನೆ ಈ ಸಾಂಪ್ರದಾಯಿಕ ದೃಷ್ಟಿಕೋನದ ಬಗೆಗೆ ಮಹತ್ವದ ಪ್ರಶ್ನೆಗಳನ್ನು ಎತ್ತುತ್ತದೆ. ಅವರ ಸಂಶೋಧನೆಯು ನಗರ ಸುಧಾರಣೆಯ ಹೆಸರಿನಲ್ಲಿ ನಡೆಯುತ್ತಿರುವ ಅಭಿವೃದ್ಧಿಯು ಎಲ್ಲರಿಗೂ ಸಮಾನ ಪ್ರಯೋಜನ ನೀಡುವುದಿಲ್ಲ.

**ಅಭಿವೃದ್ಧಿಯ ಅಸಮಾನ ಹಂಚಿಕೆ:** ಪ್ರೊ. ರಂಗನಾಥನ್ ಅವರ ವಿಶ್ಲೇಷಣೆಯು ತೋರಿಸುವಂತೆಯೇ ಬೆಂಗಳೂರು ನಗರದಲ್ಲಿನ ಅನೇಕ ಸುಧಾರಣಾ ಯೋಜನೆಗಳು ನಿಜವಾಗಿ ಮಧ್ಯಮ ಮತ್ತು ಮೇಲ್ವರ್ಗದ ಹಿತಾಸಕ್ತಿಗೆ ಸೇವೆ ಮಾಡುತ್ತಿವೆ. ಅಂಚಿನ ಸಮುದಾಯಗಳನ್ನು ಹಿಂದೆ ತಳ್ಳುತ್ತವೆ. ಉದಾಹರಣೆಗೆ; ಸ್ಲಮ್ ಪ್ರದೇಶಗಳ ತೆರವುಗೊಳಿಸುವ ಯೋಜನೆಗಳು, ಬಡಜನರನ್ನು ನಗರದಿಂದ ಹೊರದಬ್ಬುತ್ತವೆ. ಹೊಸ ರಸ್ತೆಗಳು, ಫ್ಲೈಓವರ್‌ಗಳು ಮತ್ತು ವಸತಿ ಯೋಜನೆಗಳು ಕೆಲವರಿಗಷ್ಟೇ ಲಭ್ಯವಾಗುತ್ತವೆ. ಈ ಕ್ರಮಗಳು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಮತ್ತಷ್ಟು ಗಾಢಗೊಳಿಸುತ್ತವೆ.

**ಸುಧಾರಣೆ ಮತ್ತು ಅನ್ಯಾಯ:** ಅವರ ಸಂಶೋಧನೆಯು ಸೂಚಿಸುವ ಮತ್ತೊಂದು ಅಂಶ ವೆಂದರೆ; ನಗರ ಸುಧಾರಣೆ ಎಂಬ ಪದವು ಕೆಲವು ಸಂದರ್ಭಗಳಲ್ಲಿ ಶಕ್ತಿ ಮತ್ತು ಸಂಪತ್ತಿನ ಮನರ್ವಿತರಣೆಯ ಬದಲು ಪುನಃ ಕೇಂದ್ರೀಕರಣದ ಸಾಧನವಾಗುತ್ತದೆ. ಅಂದರೆ,

ಅಭಿವೃದ್ಧಿಯ ಯೋಜನೆಗಳು ನಗರದ ಸಂಪನ್ಮೂಲಗಳನ್ನು ಸಮಾನವಾಗಿ ಹಂಚಿಕೊಳ್ಳದೆ, ಅಧಿಕಾರ ಮತ್ತು ಹೂಡಿಕೆ ಹೊಂದಿರುವ ವರ್ಗಗಳ ಸುತ್ತಲೆಯೇ ಚಲಿಸುತ್ತವೆ.

**ಪರ್ಯಾಯ ದೃಷ್ಟಿಕೋನ:** ನಿಜವಾದ ನಗರ ಸುಧಾರಣೆ ಎಂದರೆ; ಕೇವಲ ಭೌತಿಕ ಮೂಲಸೌಕರ್ಯ ನಿರ್ಮಾಣವಲ್ಲ. ಅದು ಸಾಮಾಜಿಕ ನ್ಯಾಯ, ಸಮಾನ ಅವಕಾಶ ಮತ್ತು ಸಮಗ್ರ ಅಭಿವೃದ್ಧಿಯ ಪರಿಕಲ್ಪನೆಯಾಗಿರಬೇಕು. ಅಂಚಿನ ಸಮುದಾಯಗಳ ಹಕ್ಕುಗಳ ರಕ್ಷಣೆ, ಸ್ಥಳೀಯ ಸಂಸ್ಕೃತಿ ಮತ್ತು ವಾಸ್ತು ಪರಂಪರೆಯ ಗೌರವ, ಪರಿಸರದ ಶಾಶ್ವತತೆ, ಇವುಗಳ ಸಮನ್ವಯವೇ ನಿಜವಾದ ಸುಧಾರಣೆಯ ದಾರಿ. ಬೆಂಗಳೂರಿನ ಬೆಳವಣಿಗೆ ಇಂದು ದೇಶದ ಪ್ರಗತಿಯ ಸಂಕೇತವಾದರೂ, ನಗರ ಸುಧಾರಣೆಯ ಪರಿಕಲ್ಪನೆಯನ್ನು ಪುನರ್‌ವಿಚಾರಿಸುವ ಅಗತ್ಯ ಇದೆ. ಪ್ರೊ. ಮಾಲಿನಿ ರಂಗನಾಥನ್ ಅವರ ಸಂಶೋಧನೆಯು ನಮಗೆ ನೆನಪಿಸುತ್ತದೆ. ಅಭಿವೃದ್ಧಿಯು ನಿಜವಾದ ಅರ್ಥದಲ್ಲಿ ಜನಪರ ಆಗಬೇಕಾದರೆ, ಅದು ಅಂಚಿನವರ ಧ್ವನಿಯನ್ನು ಒಳಗೊಂಡಿರಬೇಕು ಮತ್ತು ಸಮಾನತೆ ಹಾಗೂ ನ್ಯಾಯದ ಮೂಲತತ್ವಗಳನ್ನು ಅಳವಡಿಸಿಕೊಳ್ಳಬೇಕು.

**ನಗರ ಸುಧಾರಣೆ:** ಸಮಗ್ರ ದೃಷ್ಟಿಕೋನ – 1890 ರಿಂದ 2010ರವರೆಗೆ ಬೆಂಗಳೂರಿನಲ್ಲಿ ನಡೆದ ಘಟನೆಗಳು ಮತ್ತು ಜಾರಿಗೆ ಬಂದ ವಿವಿಧ ಯೋಜನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ; ಎನ್ವಿರಾನ್ಮೆಂಟ್ ಮತ್ತು ಪ್ಲಾನಿಂಗ್ ನಿಯತಕಾಲಿಕದಲ್ಲಿ ಪ್ರಕಟವಾದ ಅಧ್ಯಯನವು, ನಗರ ಸುಧಾರಣೆ ಕುರಿತ ಹೊಸ ದೃಷ್ಟಿಕೋನವನ್ನು ತೋರಿಸಿದೆ. ಅಧ್ಯಯನದ ಪ್ರಕಾರ; ನಗರ ಸುಧಾರಣೆ ಎಂದರೆ; ಒಟ್ಟು ಜನಸಂಖ್ಯೆಯ ಅತಿ ಹೆಚ್ಚು ಭಾಗವನ್ನು ತಲುಪುವ ಪ್ರಯತ್ನವಾಗಿರಬೇಕು. ಈ ಉದ್ದೇಶವನ್ನು ಸಾಧಿಸಲು, ಆಡಳಿತಗಾರರು ಯೋಜನೆಗಳನ್ನು ಪ್ರಜ್ಞಾಪೂರ್ವಕವಾಗಿ ಜಾರಿಗೊಳಿಸಬೇಕು. ಹೀಗೆ ನಡೆದಾಗ, ನಗರೀಕರಣದ ಜವಾಬ್ದಾರಿಗಳು ಸಮಗ್ರವಾಗಿ ನಡೆಯುತ್ತವೆ ಮತ್ತು ಅನೇಕ ಸಾಮಾಜಿಕ, ಆರ್ಥಿಕ ಹಾಗೂ ಪರಿಸರ ಸಂಬಂಧಿತ ಸಮಸ್ಯೆಗಳಿಂದ ಸಮಾಜವನ್ನು ಮುಕ್ತಗೊಳಿಸುವುದು ಸಾಧ್ಯವಾಗುತ್ತದೆ. ಯೋಜನೆಗಳು ಸಮಾಜದ ಪ್ರತಿ ಮೂಲೆಗಳಿಗೆ ತಲುಪಿದಾಗ ಮತ್ತು ಎಲ್ಲಾ ವರ್ಗದ ಜನರನ್ನು ಒಳಗೊಂಡಾಗ ಮಾತ್ರ, ಅವುಗಳನ್ನು ಯಶಸ್ವಿ ಮತ್ತು ಶಾಶ್ವತವೆಂದು ಪರಿಗಣಿಸಬಹುದು.

**ಇತಿಹಾಸದ ಮೂರು ಘಟ್ಟಗಳು ಮತ್ತು ನಗರೀಕರಣದ ಪ್ರಭಾವ:** ಅಧ್ಯಯನವು ಪ್ರಮುಖವಾಗಿ ಬೆಂಗಳೂರಿನ ಇತಿಹಾಸವನ್ನು ಮೂರು ಘಟ್ಟಗಳ ಮೂಲಕ ವಿಶ್ಲೇಷಿಸುವ ಮೂಲಕ ವಸಾಹತುಶಾಹಿ ಆಡಳಿತ (Colonial Administration), ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಜಾರಿಗೆ ಬಂದ ಯೋಜನೆಗಳು ನಗರದ ಮೂಲಸೌಕರ್ಯ, ನಗರ ವಿನ್ಯಾಸ ಮತ್ತು ವಸತಿ ವ್ಯವಸ್ಥೆಯ ರೂಪುರೇಷೆಗಳನ್ನು ನಿರ್ಮಿಸಿದವು. ರಾಷ್ಟ್ರವಾದಿ ಆಡಳಿತ (Post–Independence State–led Administration) ಸ್ವಾತಂತ್ರ್ಯೋತ್ತರ ಭಾರತದಲ್ಲಿ ಯೋಜನೆಗಳು ಸಾರ್ವಜನಿಕ ವಸತಿ, ರಸ್ತೆ, ನೀರು ಮತ್ತು ಶುದ್ಧತಾ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ನಗರೀಕರಣಕ್ಕೆ ದಾರಿ ತೋರಿದವು. ನವ ಉದಾರವಾದ ಅವಧಿ (Liberalized Era) – 1980ರ ಅನಂತರ ಬಿ. ಡಿ. ಎ. ಮತ್ತು ನವೀನ ಬಂಡವಾಳ ಹೂಡಿಕೆ ಯೋಜನೆಗಳು, ನಗರ ವಿಸ್ತಾರ ಮತ್ತು ಅನಿಯೋಜಿತ ವಸತಿಗಳನ್ನು ನಿಯಂತ್ರಿಸುವ ಮೂಲಕ ನವೀನ ಉದ್ದೇಶಗಳೊಂದಿಗೆ ಕಾರ್ಯನಿರ್ವಹಿಸಿತು. ಪ್ರತಿಯೊಂದು ಆಡಳಿತವು ತನ್ನದೇ ಆದ ವಿಭಿನ್ನ ನೀತಿಗಳು ಮತ್ತು ಉದ್ದೇಶಗಳನ್ನು ಹೊಂದಿದ್ದು, ಅವುಗಳು ನಗರೀಕರಣಕ್ಕೆ ಮತ್ತು ನಗರಗಳ ನಿಜವಾದ ಅಭಿವೃದ್ಧಿಗೆ ವಿಭಿನ್ನ ರೀತಿಯಲ್ಲಿ ಸಹಾಯಕವಾಗಿದ್ದವು ಎಂಬುದನ್ನು ಅಧ್ಯಯನವು ತೋರಿಸುತ್ತದೆ.

**ವಸಾಹತುಶಾಹಿ ನಗರೀಕರಣದ ವೈಶಿಷ್ಟ್ಯಗಳು:** ಪ್ರೊ. ಮಾಲಿನಿ ರಂಗನಾಥನ್ ವಿವರಿಸುವಂತೆ; 1800ರ ದಶಕದ ಕೊನೆಯಿಂದ 1900ರ ದಶಕದ ಅಂತ್ಯದವರೆಗೆ, ಪ್ರಪಂಚದಾದ್ಯಂತ ಅನೇಕ ವಸಾಹತುಶಾಹಿ ನಗರಗಳು ಅಭಿವೃದ್ಧಿ ಹೊಂದುತ್ತಿರುವ ನಗರಗಳು ಎಂಬ ಹೆಸರಿನಿಂದ ಕರೆಸಲ್ಪಟ್ಟವು. ಭಾರತದ ಬ್ರಿಟಿಷ್ ಆಳ್ವಿಕೆಗೆ ಒಳಪಟ್ಟ ನಗರಗಳೂ ಈ ಶ್ರೇಣಿಯಿಂದ ವಿಭಿನ್ನವಾಗಿರಲಿಲ್ಲ. ಬ್ರಿಟಿಷ್ ಆಡಳಿತವು ಭಾರತೀಯ ಭೂಮಿಯನ್ನು ಕೇವಲ ತೆರಿಗೆಯ ವಸ್ತುವಾಗಿ ಪರಿಗಣಿಸಿತು. ಆದರೆ, ಭೂಮಿಯ ಜೊತೆಗೆ ಭಾವನಾತ್ಮಕ ಸಂಬಂಧ ಹೊಂದಿದ್ದ ಭಾರತೀಯರನ್ನು ಈ ಪ್ರಯತ್ನ ನಿರಾಸೆಗೊಳಿಸಿತು. ಅವರು ಪಾಶ್ಚಾತ್ಯ ಪದ್ಧತಿಗಳನ್ನು ಅನುಸರಿಸಿ ತಮ್ಮ ಯೋಜನೆಗಳನ್ನು ಭಾರತೀಯರ ಮೇಲೆ ಜಾರಿಗೊಳಿಸಿದರು. ನಗರೀಕರಣದ ಹೆಸರಿನಲ್ಲಿ ನಡೆದ ವಸತಿ ವಿಸ್ತರಣೆ ಮತ್ತು ಕೊಳಚೆ ಪ್ರದೇಶದ ನಿವಾರಣೆ ಕ್ರಮಗಳು, ಕೆಲವೊಂದು ಸಂದರ್ಭಗಳಲ್ಲಿ ಭಾಷೆ, ಜಾತಿ ಮತ್ತು ಸಾಮಾಜಿಕ ವರ್ಗದ ಆಧಾರದ ಮೇಲೆ ಜನರನ್ನು ಪ್ರಜ್ಞಾಪೂರ್ವಕವಾಗಿ ವಿಭಜಿಸುವ ಪ್ರಯತ್ನಗಳಾಗಿ ರೂಪುಗೊಂಡವು. ಈ ಕ್ರಮಗಳು ನಗರೀಕರಣದ ಸಾಮಾಜಿಕ ಅಸಮಾನತೆಗಳ ಮೂಲಭೂತ ಕಾರಣಗಳನ್ನಾಗಿ ಪರಿಣಮಿಸಿದವು.

**ಬೆಂಗಳೂರಿನ ಸ್ಥಳೀಯ ಪೇಟೆ ಮತ್ತು ಯುರೋಪಿಯನ್ ಪ್ರದೇಶಗಳ ವಿಭಜನೆ:** ಬೆಂಗಳೂರು ಕೂಡ ಪ್ರಜ್ಞಾಪೂರ್ವಕ ಶೂನ್ಯ ಯೋಜನೆಯ ಪರಿಣಾಮದಿಂದ ಹೊರತಾಗಿರಲಿಲ್ಲ. ಈಶಾನ್ಯ ಭಾಗದಲ್ಲಿ ಯುರೋಪಿಯನ್ ವಸತಿಪೀಠಗಳು ಪ್ರತ್ಯೇಕವಾಗಿ ನಿರ್ಮಿತವಾಗಿದ್ದು, ಇಂದಿಗೂ ಅಲ್ಲಿನ ಉಪನಗರಗಳ ಹೆಸರಿನಿಂದ ಇದನ್ನು ಅಂದಾಜಿಸಬಹುದು. ಸ್ಥಳೀಯ ಜನರು ಪಶ್ಚಿಮದ ಪೇಟೆಗೆ (ಈಗ ಶಿವಾಜಿನಗರ) ಸೀಮಿತಗೊಂಡಿದ್ದರು. ಎರಡು ಪ್ರದೇಶಗಳ ನಡುವೆ ಭೌತಿಕ ಸಂಪರ್ಕವಿದ್ದರೂ, ನಗರ ಪರಿಸರದಲ್ಲಿ ಸ್ಪಷ್ಟ ವೈಶಿಷ್ಟ್ಯಗಳು ಮತ್ತು ಅಸಮಾನತೆಗಳು ಕಾಣಿಸುತ್ತವೆ. ಸ್ಥಳೀಯ ಪೇಟೆಯಲ್ಲಿ ಇಂದಿಗೂ ಅನಿಯೋಜಿತ ರಸ್ತೆ, ಒಳಚರಂಡಿ ಮತ್ತು ಮೂಲಸೌಕರ್ಯದ ಕೊರತೆ ಇದೆ. ಯುರೋಪಿಯನ್ ವಸತಿಪೀಠಗಳಿಗೆ ಹೋಲಿಸಿದರೆ, ಸಾರ್ವಜನಿಕ ಮೂಲಸೌಕರ್ಯಗಳಿಗೆ ವಸಾಹತುಶಾಹಿ ಸರ್ಕಾರ ಅರ್ಧದಷ್ಟು ಕೂಡ ಖರ್ಚು ಮಾಡಿಲ್ಲ. ಇದು ಈ ಅಸಮಾನತೆಯ ಪ್ರಮುಖ ಕಾರಣವಾಗಿದೆ. ಈ ಸಂದರ್ಭ, ಬೆಂಗಳೂರು ನಗರದಲ್ಲಿ ಆಧುನಿಕ ನಗರೀಕರಣದ ಮೂಲತತ್ವಗಳು ಮತ್ತು ಸಾಮಾಜಿಕ ಅಸಮಾನತೆಗಳ ಸ್ಥಿರತ್ವವನ್ನು ಸ್ಪಷ್ಟವಾಗಿ ಪ್ರದರ್ಶಿಸುತ್ತವೆ.

**1898ರ ಪ್ಲೇಗ್ ಮತ್ತು ವಸತಿ ವಿಸ್ತರಣೆ:** ಸಾಮಾಜಿಕ ಪರಿಣಾಮಗಳು – 1898ರ ಸುತ್ತಲೂ, ಬೆಂಗಳೂರಿನಲ್ಲಿ ನಡೆದ ಕ್ರೂರ ಕೃತ್ಯಗಳು ಮತ್ತು ಪ್ಲೇಗ್ ರೋಗದ ಹರಡುವಿಕೆ ಕಾರಣ, ಜನಸಂಖ್ಯೆಯ ಸುಮಾರು ಶೇಕಡಾ 10 ರಷ್ಟು ಮಂದಿ ಅಸುನೀಗಿದರು. ಈ ಸಮಯದಲ್ಲಿ, ವಸಾಹತುಶಾಹಿ ಸರ್ಕಾರವು ಜನರನ್ನು ಪ್ಲೇಗ್ ಶಿಬಿರಗಳಿಗೆ ಬಲವಂತವಾಗಿ ಸ್ಥಳಾಂತರಿಸಿತು. ಅದೇ ಅವಧಿಯಲ್ಲಿ ನಡೆಯುತ್ತಿರುವ ನಗರ ವಿಸ್ತರಣೆ ಮುಂದಿನ ಹಂತದಲ್ಲಿ ಬಸವನಗುಡಿಯನ್ನು ಸ್ಥಾಪಿಸಿದಾಗ, ಕೆಲ ಬಡವರು ಮತ್ತು ಸ್ಥಳಾಂತರಿಸಲ್ಪಟ್ಟ ಸ್ಥಳೀಯರು ಅಲ್ಲಿಯ ವಸತಿಯನ್ನು ಪಡೆಯಲು ಸಾಧ್ಯವಾಯಿತು. ಈ ಕಾರಣಕ್ಕಾಗಿ ಸರ್ಕಾರ ತೆರಿಗೆಯ ಆದಾಯದ ಹೊಸ ನಿಯಮಗಳನ್ನು ರೂಪಿಸಿತು. ಆ ಪರಿಣಾಮವಾಗಿ; ಹೊಸ ಸಾಮಾಜಿಕ ವರ್ಗ ಸೃಷ್ಟಿಯಾಯಿತು, ಪ್ರತ್ಯೇಕತೆ ಇನ್ನಷ್ಟು ತೀವ್ರವಾಯಿತು. ಈ ಸುಧಾರಣೆಗಳ ಪ್ರಯೋಜನವನ್ನು ಯುರೋಪಿಯನ್ ವಸತಿಪೀಠದಲ್ಲಿ ವಾಸಿಸುವರು ಮತ್ತು ಮೇಲ್ವರ್ಗದ ಭಾರತೀಯರು ಮಾತ್ರ ಪಡೆದರು. ಮೂಲ ನಿವಾಸಿ ಬಡಜನರು ಮತ್ತು ಸಾಮಾಜಿಕ ಅಲ್ಪಾಪರಿಹಾರ ಹೊಂದಿರುವ ವರ್ಗ ನಿರಾಶ್ರಿತರಾಗಿ ಉಳಿದರು. ಈ ಘಟನೆಯು ಬೃಹತ್

ಸಾಮಾಜಿಕ ಅಸಮಾನತೆ ಮತ್ತು ನಗರೀಕರಣದ ವೈಪರಿತ್ಯವನ್ನು ಸ್ಪಷ್ಟವಾಗಿ ತೋರಿಸುತ್ತದೆ.

**ಸ್ವಾತಂತ್ರ್ಯೋತ್ತರ ನಗರ ಯೋಜನೆ ಮತ್ತು ನವ ಉದಾರವಾದದ ವಸಾಹತುಶಾಹಿ ಪರಂಪರೆ:**

**ಸುಧಾರಣೆಯ ಹೊಸ ಹಾದಿ:** ಪ್ರೊಫೆಸರ್ ರಂಗನಾಥನ್ ಅವರ ವಿಶ್ಲೇಷಣೆಯ ಪ್ರಕಾರ; ಸ್ವಾತಂತ್ರ್ಯಾನಂತರ, ಸುಧಾರಣೆಯು ಭಾರತದಲ್ಲಿ ಮುಂದುವರಿಯಿತು; ವಸಾಹತುಶಾಹಿ ಅನಂತರದ ನಗರ ಸರ್ಕಾರಗಳು ಸುಧಾರಿತ ಕಾನೂನುಗಳನ್ನು ರೂಪಿಸಿದವು. ಹೊಸ ಸಂಸ್ಥೆಗಳನ್ನು ಸ್ಥಾಪಿಸಿದವು ಮತ್ತು ಜನರಿಗಾಗಿ ಹಲವು ಯೋಜನೆಗಳನ್ನು ಜಾರಿಗೊಳಿಸಿದವು. ಈ ಹಂತದಲ್ಲಿ ಜಯಮಹಲ್, ಜಯನಗರ ಮತ್ತು ರಾಜಾಜಿನಗರ ಎಂಬ ಪ್ರದೇಶಗಳು ನಗರ ವಿಸ್ತರಣೆಯ ಪ್ರಮುಖ ಚಿಹ್ನೆಗಳಾದವು. ವಸತಿ ನಿರ್ಮಾಣವು ಸಾರ್ವಜನಿಕ ಕ್ಷೇತ್ರದ ಹೊಸ ಉದ್ಯಮವಾಗಿ ಬೆಳೆಯಿತು. ಆದರೆ ಈ ಅಭಿವೃದ್ಧಿಯು ಸಮಾನತೆಯ ಮಾರ್ಗದಲ್ಲಿ ನಡೆದಿಲ್ಲ. ಮಧ್ಯಮ ವರ್ಗದ ಮೌಲ್ಯಗಳು ಮತ್ತು ಸಂಸ್ಕೃತಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಲಾಯಿತು. ಇನ್ನು ಕೆಳವರ್ಗ ಹಾಗೂ ಬಹಿಷ್ಕೃತ ಸಮುದಾಯಗಳು ನಗರ ವಿನ್ಯಾಸದಿಂದ ಹೊರಗಿಟ್ಟಲ್ಪಟ್ಟವು.

**ಸಾಮಾಜಿಕ ಪ್ರತ್ಯೇಕತೆ ಮತ್ತು ಸೌಲಭ್ಯಗಳ ಅಸಮಾನ ವಿತರಣೆ:** ಪ್ರೊಫೆಸರ್ ರಂಗನಾಥನ್ ಅವರ ಪ್ರಕಾರ; ಕೆಲ ಕಾನೂನುಗಳು ಮತ್ತು ನಂಬಿಕೆಗಳು ಈ ಪ್ರತ್ಯೇಕತೆಯನ್ನು ಪೋಷಿಸಿ, ಸಮಾಜಕ್ಕೆ ಹಾನಿಯುಂಟುಮಾಡಿದವು. ಉದಾಹರಣೆಗೆ; ಕಾವೇರಿ ನೀರಿನ ಸರಬರಾಜು ಯೋಜನೆಗಳು (1970ರ ದಶಕ) ಸುಧಾರಿತ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಮಧ್ಯಮ ಮತ್ತು ಮೇಲ್ವರ್ಗದ ಜನರಿಗೆ ಮಾತ್ರ ಲಾಭಕರವಾಗಿದ್ದವು; ಬಡ ಮತ್ತು ಅಲ್ಪಸಂಖ್ಯಾತ ಪ್ರದೇಶಗಳು ಈ ಸೌಲಭ್ಯದಿಂದ ವಂಚಿತವಾಗಿದ್ದವು.

**ನವ ಉದಾರವಾದದ ಬದಲಾವಣೆಗಳು ಮತ್ತು ಅಕ್ರಮ ನಗರೀಕರಣ:** ನವ ಉದಾರವಾದದ ನೀತಿಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಅನಿವಾಸಿ ಭಾರತೀಯರ ಹೂಡಿಕೆಗೆ ಒತ್ತು ನೀಡಿದ ಬಿಡಿಎ ಅಕ್ರಮ ಕಟ್ಟಡಗಳನ್ನು ಕೆಡವುವುದರ ಬದಲು ಅವುಗಳನ್ನು ಕ್ರಮಬದ್ಧಗೊಳಿಸುವ (ಅಕ್ರಮಾ ಸಕ್ರಮಾ) ನೀತಿಯನ್ನು ಜಾರಿಗೊಳಿಸಿತು. ಆದರೆ, ಇದರ ಪರಿಣಾಮವಾಗಿ, 1980 ರಿಂದ 2009ರವರೆಗೆ ಅಕ್ರಮ ಸ್ಥಳಗಳ ಸಂಖ್ಯೆ ಆರು ಪಟ್ಟು ಹೆಚ್ಚಾಗಿದೆ. ಈ ನೀತಿಯು ವಾಸ್ತವದಲ್ಲಿ ಯೋಜಕರು, ಕಂದಾಯ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಮಾತ್ರ ಲಾಭದಾಯಕವಾಗಿತ್ತು. ಅನೌಪಚಾರಿಕ ಹಾಗೂ ಅನಿಯೋಜಿತ ನಗರೀಕರಣದಿಂದ ಸಾಮಾಜಿಕ ಮತ್ತು ಆರ್ಥಿಕ ನಷ್ಟಗಳು ಹೆಚ್ಚಾಗಿವೆ. ಅದೇ ರೀತಿ, ನಗರ ವಿಸ್ತರಣೆಗಾಗಿ ಕೃಷಿ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮಗಳು, ರೈತರಿಗೆ ಸೂಕ್ತ ಪರಿಹಾರ ನೀಡದಿರುವುದು ಮತ್ತು ವಿಳಂಬ ದಿಂದ ಜೀವನ ಕಠಿಣಗೊಳ್ಳುವುದು. ಇವುಗಳು ಆರ್ಥಿಕ ಅಸಮಾನತೆ ಮತ್ತು ಅಕ್ರಮ ವಸತಿಗಳ ವೃದ್ಧಿಗೆ ಕಾರಣವಾದವು.

**ಪ್ರೊಫೆಸರ್ ರಂಗನಾಥನ್ ಅವರ ಪ್ರತಿಪಾದನೆ:** ಅವರು ಈ ಅಸಮಾನತೆಯ ನಿಲುಗಡೆಯನ್ನು ಹೀಗೆ ವಿಶ್ಲೇಷಿಸುತ್ತಾರೆ; ನಾವು ಇಂದು ನಗರಗಳನ್ನು ನೋಡಿದಾಗ, ಕೆಲ ಪ್ರದೇಶಗಳು ಏಕೆ ಅಚ್ಚುಕಟ್ಟಾಗಿ ಯೋಜಿತವಾಗಿವೆ ಮತ್ತು ಇತರವು ಅನಿಯೋಜಿತವಾಗಿವೆ? ಏಕೆ ಕೆಲವಲ್ಲಿ ನೀರು ಮತ್ತು ಸ್ವಚ್ಛತೆಯ ಸೌಲಭ್ಯಗಳು ಸ್ಥಿರವಾಗಿವೆ? ಏಕೆ ಕೆಲವು ಪ್ರದೇಶಗಳು ಶ್ರೀಮಂತ ವರ್ಗದವರ ವಾಸಸ್ಥಳಗಳಾಗಿದ್ದರೆ, ಇತರ ಪ್ರದೇಶಗಳು ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ಬಡವರ ನಿವಾಸಗಳಾಗಿವೆ? ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ಶತಮಾನದ ಹಿಂದೆ

ನಗರವನ್ನು ಹೇಗೆ ಯೋಜಿಸಲಾಯಿತು ಎಂಬುದನ್ನು ಅರಿಯಬೇಕು. ಈ ಅಧ್ಯಯನವು ನಗರ ವಿಕಾಸದ ಅಂತರ್ನಿಹಿತ ಅಸಮಾನತೆಯನ್ನು ಬೆಳಕಿಗೆ ತಂದು, ವಸಾಹತುಶಾಹಿ ಮತ್ತು ನವಉದಾರವಾದದ ಯೋಜನೆಗಳ ನಡುವಿನ ಸಾಂಸ್ಕೃತಿಕ ನಿರಂತರತೆಯನ್ನು ಗುರುತಿಸುತ್ತದೆ. ಬೆಂಗಳೂರಿನ ನಗರೀಕರಣವು ಕೇವಲ ಭೌಗೋಳಿಕ ವಿಸ್ತರಣೆ ಮಾತ್ರವಲ್ಲ, ಅದು ಸಾಮಾಜಿಕ ವರ್ಗೀಕರಣದ ರಾಜಕೀಯ ಪ್ರಕ್ರಿಯೆಯೂ ಆಗಿದೆ ಎಂಬುದು ಈ ಅಧ್ಯಯನದ ಪ್ರಮುಖ ತತ್ವವಾಗಿರುತ್ತದೆ.

**ಉಪಸಂಹಾರ**

ಈ ಅಧ್ಯಯನವು ಬೆಂಗಳೂರಿನ ನಗರೀಕರಣ ಮತ್ತು ವಸಾಹತುಶಾಹಿ ಪರಂಪರೆಯ ಪ್ರಭಾವವನ್ನು ವಿಶ್ಲೇಷಿಸಿದೆ. 1890ರಿಂದ 2010ರವರೆಗೆ ನಡೆದ ಪ್ರಮುಖ ಘಟನೆಗಳು, ವಸತಿ ಯೋಜನೆಗಳು, ನಗರ ವಿಸ್ತರಣೆ ಮತ್ತು ಸಾರ್ವಜನಿಕ ನೈರ್ಮಲ್ಯ, ನೀರು, ರಸ್ತೆ ವೀಕ್ಷಣೆಗಳನ್ನು ಪರಿಗಣಿಸುವ ಮೂಲಕ, ನಗರ ಅಭಿವೃದ್ಧಿಯ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಕುರಿತು ಸ್ಪಷ್ಟ ದೃಷ್ಟಿಕೋನವನ್ನು ಒದಗಿಸಿರುತ್ತದೆ.

**ಮುಖ್ಯ ತತ್ವಗಳು**

- ವಸಾಹತುಶಾಹಿ ವಾಸ್ತುಶಿಲ್ಪ ಮತ್ತು ನಗರ ಯೋಜನೆಯು ಯುರೋಪಿಯನ್ ಮಾದರಿಯನ್ನು ಅನುಸರಿಸಿ, ಬ್ರಿಟಿಷ್ ಆಡಳಿತದ ಅವಶ್ಯಕತೆಗಳಿಗೆ ತಕ್ಕಂತೆ ರೂಪುಗೊಂಡಿತು. ಆದರೆ, ಸ್ಥಳೀಯ ಜನರು ಮತ್ತು ಮೂಲ ನಿವಾಸಿಗಳನ್ನು ಗಣನೆಗೆ ಇಲ್ಲದೆ ಹೊರಗಿಟ್ಟು, ನಗರದಲ್ಲಿ ಸಾಮಾಜಿಕ ವಿಭಜನೆ ನಿರ್ಮಾಣವಾಯಿತು.
- 1898ರ ಪ್ಲೇಗ್, ನಗರ ವಿಸ್ತರಣೆ ಮತ್ತು ಹೊಸ ವಸತಿ ಯೋಜನೆಗಳು ಮೇಲ್ವರ್ಗದ ಭಾರತೀಯರು ಮತ್ತು ಯುರೋಪಿಯನ್ನರಿಗೆ ಮಾತ್ರ ಲಾಭದಾಯಕವಾಗಿದ್ದವು. ಬಡಜನರು ಮತ್ತು ಅಲ್ಪಸಂಖ್ಯಾತ ಸಮುದಾಯಗಳು ನಿರಾಶ್ರಿತರಾಗಿ ಉಳಿದರು.
- ಸ್ವಾತಂತ್ರ್ಯೋತ್ತರ ಮತ್ತು ನವಉದಾರವಾದದ ಯೋಜನೆಗಳು (ಜಯಮಹಲ್, ಜಯನಗರ, ರಾಜಾಜಿನಗರ) ನಗರೀಕರಣಕ್ಕೆ ಹೊಸ ಆಯಾಮ ಕೊಟ್ಟವು. ಸಾರ್ವಜನಿಕ ವಸತಿ ಯೋಜನೆಗಳು ಹೆಚ್ಚಳವಾದರೂ, ಅನಿಯೋಜಿತ ನಗರೀಕರಣ ಮತ್ತು ಅಕ್ರಮ ವಸತಿ ಕ್ರಮಗಳಿಂದ ಕೆಲ ಸಮುದಾಯಗಳು ಲಾಭ ರಹಿತವಾಗಿ ಬಿಟ್ಟುಕೊಡಲ್ಪಟ್ಟವು.
- ನಗರೀಕರಣವು ಮೇಲ್ವರ್ಗ ಮತ್ತು ಮಧ್ಯಮ ವರ್ಗಕ್ಕೆ ಮಾತ್ರ ಲಾಭ, ಕೆಳ-ವರ್ಗ ಮತ್ತು ಬಡವರಿಗೆ ಅನ್ಯಾಯ ಮತ್ತು ಸೀಮಿತ ಸೌಲಭ್ಯಗಳನ್ನು ನೀಡಿದ ಪ್ರಕ್ರಿಯೆಯಾಗಿತ್ತು.
- ಈ ಅಧ್ಯಯನವು ನಗರ ಯೋಜನೆ, ಸಾಮಾಜಿಕ ಸಮಾನತೆ, ಮತ್ತು ಸಮಗ್ರ ಅಭಿವೃದ್ಧಿ ನಡುವಿನ ಸಂಬಂಧವನ್ನು ವಿವರಿಸಿದೆ ಮತ್ತು ಭವಿಷ್ಯದ ನಗರ ಯೋಜನೆಗಳಿಗೆ ಪಾಠಗಳನ್ನು ನೀಡುತ್ತದೆ.

ಆಧುನಿಕ ಬೆಂಗಳೂರಿನ ವಸಾಹತುಶಾಹಿ ಪರಂಪರೆ ನಗರದ ವಿಕಾಸದ ಪ್ರಮುಖ ಅಡಿಪಾಯವಾಗಿದೆ. ಆದರೆ, ಇದರಿಂದ ಉಂಟಾದ ಸಾಮಾಜಿಕ ಅಸಮಾನತೆಗಳು, ಮೂಲ ನಿವಾಸಿಗಳ ನಿರಾಶ್ರಿತತೆ ಮತ್ತು ಪ್ರತ್ಯೇಕತೆಯ ಸಮಸ್ಯೆಗಳು ಇನ್ನೂ ಈ ನಗರದಲ್ಲಿ ಕಾಣಿಸಿಕೊಂಡು ಬರುತ್ತಿವೆ. ಶಾಶ್ವತ, ಸಮಾನ ಮತ್ತು ಸಮಗ್ರ ನಗರೀಕರಣಕ್ಕೆ, ಇತಿಹಾಸಿಕ ಪಾಠಗಳನ್ನು ಅರಿತು, ಯೋಜನೆಗಳನ್ನು ಪ್ರಜ್ಞಾಪೂರ್ವಕವಾಗಿ ರೂಪಿಸುವುದು ಅಗತ್ಯವಾಗಿದೆ.

### ಪರಾಮರ್ಶನ ಗ್ರಂಥಗಳು:


1. Bangalore District Gazetteer, Government of Karnataka, 1987
2. Bangalore Municipal Records, 1870
3. Chris Bayly, Empire and Information, Cambridge University Press, 1999
4. Education Report of Mysore State, 1910
5. Garden City Planning Report, Mysore State Archives, 1915
6. Gazetteer of Mysore, Vol–II, Government Press, 1897
7. Janaki Nair, The Promise of the Metropolis: Bangalore's Twentieth Century, Oxford University Press, 2005
8. Jayaram. N, Globalization and Urban India, Sage Publications, 2004
9. Narayanan. R, Colonial Urbanism in South India, Routledge, 2010
10. Ramachandra Guha, Bangalore: The City of New Past, Oxford University Press, 2001



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.